

## ಸರ್ವಮೂಲ ಸಂದೇಶ

**ಸರ್ವಕ್ರಿಯಾ ಹರೌ ಭಕ್ತೇ ಹರಿಭಕ್ತೈಃ ಸ್ವನುಷ್ಠಿತಾಃ।**
**ಗುರುಭಕ್ತೈಃ ಸದಾಚಾರೈಃ ಫಲಂತ್ಯದ್ಧಾ ನಚಾನ್ಯಥಾ॥**

–ತಂತ್ರಸಾರಸಂಗ್ರಹ

ಹರಿಭಕ್ತನಿಗಾಗಿ ನಡೆಸುವ ಜಪ–ಹೋಮ–ಪೂಜಾ ಮುಂತಾದ ಯಾವುದೇ ಸತ್ಕರ್ಮಗಳಾದರೂ ಆಚಾರ ಸಂಪನ್ನರಾದ ಹರಿ–ಗುರು–ಭಕ್ತರಿಂದ ಆಚರಿಸಲ್ಪಟ್ಟರೇ ಮಾತ್ರವೇ ಫಲಪ್ರದವಾಗಬಲ್ಲದು. ಹೊರತು ಅನ್ಯರಿಂದಲ್ಲ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**


ಸಂಪುಟ–೭ ಸಂಚಿಕೆ–೧೨ ಸರ್ವಧಾರಿ ಸಂ.॥ ಕಾರ್ತಿಕ–ಮಾರ್ಗಶಿರ ಡಿಸೆಂಬರ್ ೨೦೦೮

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

**www.livepravachana.com**

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 7 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 9 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 13 |
| **ಅವಲೋಕನ** | ಸಗ್ರಿ ರಾಘವೇಂದ್ರಾಚಾರ್ಯ | 16 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 19 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 21 |
| **ಜೀವನಯಜ್ಞ** | ಶ್ರೀ ಸುನಂದಕೀ | 23 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೇ ಲಕ್ಷ್ಮೀಶಾಚಾರ್ಯ | 27 |
| **ಶ್ರೀಮಧ್ವಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 29 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣಾಚಾರ್ಯ | 31 |
| **ವಿಷ್ಣುಪುರಾಣ** | ಸ್ಫೂರ್ತಿ | 33 |
| **ಗೀತೆಯ ಸುತ್ತಾ** | ಕಾವೇಶನಾಭ | 35 |
| **ಅನುಸಂಧಾನದಲ್ಲಿ ಅಂತರ್ಯಾಮಿತ್ವ** | ಡಿ. ಗುರುಪ್ರಸಾದ್ ಭಟ್ | 37 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 39 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿ॥ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**
ವಿ॥ ಬಲರಾಮ ಭಟ್ಟ, ಉಡುಪಿ
ವಿ॥ ಮೋಹನಾಚಾರ್ಯ ಬೆಂಗಳೂರು
ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ
ಶ್ರೀ ಹರ್ಷ ಬೆಂಗಳೂರು



ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು
ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

| | | | |
|---|---|---|---|
| **ಬಿಡಿ ಪ್ರತಿ** | : ರೂ. **8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00


ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ಧಾರರು

# ಉದ್ಧವಗೀತೆ

-ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ಸ್ವಚ್ಛಃ ಪ್ರಕೃತಿತಃ ಸ್ನಿಗ್ಧೋ ಮಾಧುರ್ಯಃ ತೀರ್ಥವತ್ ನೃಣಾಂ।**
**ಮುನಿಃ ಪುನಾತಿ ಅಘಾತ್ ಮಿತ್ರಂ ಈಕ್ಷಣ ಸ್ಪರ್ಶಕೀರ್ತನೈಃ॥**

ಅವಧೂತರು ಯದು ಮಹಾರಾಜನಿಗೆ ಉಪದೇಶ ಮಾಡುತ್ತಾ ತನಗೆ ಅಧ್ಯಾಪನೆ ಮಾಡಿಸಿದ, ತನ್ನ ಅವಧೂತ ಚರ್ಯಗೆ ಮೂಲ ಸ್ಫೂರ್ತಿಗಳಾದ ಇಪ್ಪತ್ನಾಲ್ಕು ಗುರುಗಳನ್ನು ಪರಿಚಯಿಸಿದ ಪರಿ ಇದು. ಇಪ್ಪತ್ನಾಲ್ಕರಲ್ಲಿ ನಾಕನೆಯ ಗುರು "ಆಪಃ" ನೀರು. ಮುನಿವೃತ್ತಿಗೂ ನೀರಿಗೂ ತುಂಬಾ ನಂಟು. ಈ ಶ್ಲೋಕದಲ್ಲಿ ಶ್ರೀಕೃಷ್ಣದೇವರು ಆ ನಂಟಿನ ಗಂಟನ್ನು ಸುಂದರವಾಗಿ ಬಿಡಿಸಿದ್ದಾರೆ. ನೀರಿಗೆ ಸಂಸ್ಕೃತದಲ್ಲಿ ಮತ್ತೊಂದು ಹೆಸರು "ಆಪಃ". ಆಪಃ ಅಂದರೆ ಆಚಾರ್ಯ ಮಧ್ವರು ವಿವರಿಸಿದಂತೆ "ಆ ಪಾಲನಾತ್" "ಅಪಃ". ಯಾವುದು ಜಗತ್ತನ್ನು ಚೆನ್ನಾಗಿ ರಕ್ಷಣೆಮಾಡುತ್ತದೋ ಅದು "ಆಪಃ". ನೀರನ್ನು ಬಿಟ್ಟು ಯಾವುದೇ ಪ್ರಾಣಿ ಬಹುಕಾಲ ಬದುಕದು. ಉಸಿರಿನಷ್ಟೇ ಮುಖ್ಯ ನೀರು. ನೀರು ಹೇಗೆ ರಕ್ಷಣೆ ಮಾಡುವಂತಹದೋ ಅದೇ ರೀತಿ ಮುನಿಯೂ ಕೂಡ ಜಗತ್‌ರಕ್ಷಣೆಗಾಗಿ ಕಟಿಬದ್ಧನಾಗಿ ನಿಂತವ. ಮನುಕುಲದ ರಕ್ಷಣೆಯಲ್ಲಿ ಮುನಿಯ ಪಾತ್ರ ಅತಿಮಹತ್ತರದ್ದು.

**ಪ್ರಕೃತಿತಃ ಸ್ವಚ್ಛಃ**

ನೀರು ಮತ್ತು ಮುನಿಗಳ ಸಮಾನ ಧರ್ಮ ಇದು. ನೀರು ಪ್ರಕೃತಿಯಿಂದಲೇ ಅಂದರೆ ಸ್ವಭಾವದಿಂದಲೇ ಸ್ವಚ್ಛವಾಗಿ ಪಾರದರ್ಶಕವಾದುದು. ಒಂದು ನಾಣ್ಯವನ್ನು ಜಲಪಾತ್ರೆಯಲ್ಲಿ ಹಾಕಿದರೆ ನಾಣ್ಯ ತಳಸ್ಪರ್ಶಿಯಾಗಿದ್ದರೂ ಸ್ಫುಟವಾಗಿ ಕಾಣಿಸಿಕೊಳ್ಳುತ್ತದೆ. ಜಲವು ಸ್ವಚ್ಛ. ತಾನು ಮಾತ್ರ ಅಲ್ಲ. ತನ್ನ ಸಂಪರ್ಕಕ್ಕೆ ಒಳಪಟ್ಟವರನ್ನೂ ಸ್ವಚ್ಛಗೊಳಿಸುವ ಅದ್ಭುತ ಸಾಮರ್ಥ್ಯ ಜಲದ್ದು.

ಮುನಿಯ ಸ್ವಭಾವವೂ ಇದೇ. ಮುನಿಯ ಜೀವನ ಸ್ವಚ್ಛ, ಪಾರದರ್ಶಕ. ತನ್ನನ್ನು ಯಾವತ್ತೂ ತೆರೆದುಕೊಂಡಿರುತ್ತಾನೆ. ತನ್ನ ಸಂಗ ಬಯಸಿ ಬಂದವನನ್ನು ಸ್ವಚ್ಛಮಾಡುವ ಅಪಾರ ಕಾರುಣ್ಯ ಮುನಿಯದ್ದು.

ನೀರು ಕಸ-ಕಡ್ಡಿಗಳ, ಮಲ-ಧೂಳಿಗಳ, ಕೇಶ-ಕಶ್ಮಲಗಳ ಸಂಪರ್ಕದಿಂದ ಮಲಿನವಾಗುವುದನ್ನು ಎಲ್ಲೆಲ್ಲೂ ಕಾಣಬಹುದು. ನೀರು ಸ್ವಚ್ಛವಾಗಿದ್ದರೆ ಈ ಮಾಲಿನ್ಯ ಯಾಕೆ ಬಂತು ಎನ್ನುವ ಪ್ರಶ್ನೆ ಸಹಜ. ಉತ್ತರ "ಪ್ರಕೃತಿತಃ" ಎಂದು ಅವಧೂತರು

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ

ನೀಡಿದ್ದಾರೆ. ಸಹಜವಾಗಿ ಸ್ವಚ್ಛ ನೀರು. ರಾಡಿಯಾಗುವುದು ನಮ್ಮಿಂದ. ನೀರಿನ ಸಹಜ ಧರ್ಮ ಸ್ವಚ್ಛತೆ. ಸ್ವಚ್ಛತೆ ನೀರಿನ ಪ್ರಕೃತಿ. ಮಾಲಿನ್ಯ ವಿಕೃತಿ.

ಮುನಿಯೂ ಕೂಡ ಸಹಜವಾಗಿ ಸ್ವಚ್ಛನಾದವ. ಮುನಿಯದವ. ಆದರೆ ನಮ್ಮಂತಹ ವಿಕೃತಿಗಳ ಜೊತೆ ಸೇರಿದರೆ, ವಿಕೃತನಾಗಿ ಕಾಣಿಸುವುದೂ ಉಂಟು. ನೀರಿನಂತೆ ಎಷ್ಟು ರಾಡಿಯಾಗಿದ್ದರೂ ಮುನಿಯ ಮನಸ್ಸು ಕ್ಷಣಮಾತ್ರದಲ್ಲಿ ತಿಳಿ-ತಿಳಿಯಾಗಿ ಪಾರದರ್ಶಕವಾಗುವುದು.

**ಸ್ನಿಗ್ಧಃ**

ನೀರಿನ ಮತ್ತೊಂದು ಗುಣ ಸ್ನಿಗ್ಧತೆ. ಅಂದರೆ ಸ್ನೇಹ. ಸ್ನೇಹದ ಮಹತ್ತ್ವ ಒಟ್ಟು - ಸೇರಿಸುವಂತಹುದು. ಬಿಡಿ ಬಿಡಿಯಾದ ಪುಡಿಯನ್ನು ನೀರು ಬೆರೆಸಿದರೆ ಒಟ್ಟು ಮಾಡಬಹುದು. ಹಿಟ್ಟು ಸಕ್ಕರೆಯನ್ನು ಒಟ್ಟು ಸೇರಿಸಿ ಉಂಡೆ ಮಾಡಲು ನೀರಿನ ಸ್ನೇಹ ಅತ್ಯಗತ್ಯ. ಸ್ನೇಹ ಗುಣ ಸಮಾಜವನ್ನು ಒಟ್ಟು ಸೇರಿಸುವಂತಹುದು. ಬಿರಿದ ಹೃದಯವನ್ನು ಬೆಸೆಯುವಂತಹುದು.

ಮುನಿಯೂ ಇದಕ್ಕೆ ಅಪವಾದವಲ್ಲ. ಮುನಿಯ ಅಸಾಧಾರಣ ಗುಣ ಸ್ನಿಗ್ಧತೆ. ಮುನಿಯು ಸ್ನೇಹ ಜೀವಿ. ಮುನಿಗೆ ಸ್ನೇಹ, ಪ್ರೀತಿ, ಆದರ, ವಿಶ್ವಾಸ ಹುಟ್ಟು ಗುಣ. ಒಡೆದ ಸಮಾಜದ ಒಡಕನ್ನು ಒದ್ದೊಡಿಸಿ ಒಟ್ಟುಗೂಡಿಸುವ ಅಪೂರ್ವ ಸ್ನೇಹಗುಣ ಮುನಿಯ ಜನ್ಮಸಿದ್ಧ ಸಂಪತ್ತು. ಒಡೆದ ಚಿತ್ತದ ಒಡೆಯ-ಒಡತಿಯರನ್ನು ಒಟ್ಟು ಸೇರಿಸುವವ ಸ್ನಿಗ್ಧನಾದ ಮುನಿ ಎಂದು ಇತಿಹಾಸ ದಾಖಲೆಮಾಡಿದ ಸತ್ಯ ಸಂಗತಿ.

**ಮಾಧುರ್ಯಃ**

ಜಲದ ಮಗದೊಂದು ಗುಣ ಮಾಧುರ್ಯ. ಪಂಚಭಕ್ಷ್ಯ ಪರಮಾನ್ನತಿಂದರೂ ದೊರಕದ ತೃಪ್ತಿಯನ್ನು ನೀಡುವ ಜಲದ ಮಾಧುರ್ಯ ಅನಪಲಪನೀಯ. ನೀರು ಸಿಹಿ. ಅಂದರೆ ಸಕ್ಕರೆ ರೋಗ ಇದ್ದವರಿಗೂ ಟಾನಿಕ್ ಎನ್ನುವುದನ್ನು ಮರೆಯುವಂತಿಲ್ಲ. ಅಂದರೆ ಆರೋಗ್ಯಕರವಾದ ಮಾಧುರ್ಯ ನೀರಿನದ್ದು.

ಮುನಿಯು ಮಾಧುರ್ಯಗುಣದವ. ಮುನಿಯ ಜೀವನ ಮಧುರ. ಮುನಿಯ ಸತ್ಸಂಗ ಅತಿ ಮಧುರ. ಮುನಿಯ ನಡೆ-ನುಡಿ ಎಲ್ಲವೂ ಮಧುರಾತ್ಮಧುರತರ ಹೀಗೆ ಮುನಿಯು ದರ್ಶನ-ಸ್ಪರ್ಶನ ಕೀರ್ತನೆಗಳಿಂದ ಪ್ರತಿಯೊಬ್ಬರನ್ನೂ ಕೂಡ ಪಾಪದಿಂದ (ಅಘಾತ್) ಪಾರುಮಾಡುವ ಅಪರಂಪಾರ ತೀರ್ಥರಾಜ. ಇದೇ ಅವಧೂತರು ತೀರ್ಥರೂಪವಾದ ನೀರಿನಿಂದ ಕಲಿತ-ಕಲಿಸಿದ ಪಾಠ. ★

**ಇದು ವೇದ-ಮಹಾಭಾರತ ಮುಂತಾದ ಇತಿಹಾಸ-ಪುರಾಣಗಳ ಸಾರ.**

ವಿದ್ವತ್ ಪ್ರಪಂಚ



# ಗೀತಾಮೃತ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಎರಡೂ ಪಕ್ಷಗಳಲ್ಲಿ ತಮ್ಮ ತಮ್ಮ ಶಂಖನಾದ, ಭೇರಿತಾಡನಗಳಿಂದ ಯುದ್ಧ ಪ್ರಾರಂಭದ ಸೂಚನೆಯನ್ನು ನೀಡುತ್ತಿರಲು ಅರ್ಜುನನು ತನ್ನ ಸಾರಥಿಯಾದ ಶ್ರೀಕೃಷ್ಣನನ್ನು ಕುರಿತು ಈ ರೀತಿ ಪ್ರಾರ್ಥಿಸುತ್ತಾನೆ. ಶ್ರೀಕೃಷ್ಣನೇ! ಈ ಯುದ್ಧಕ್ಕೆ ಯಾರು ಯಾರು ಬಂದಿದ್ದಾರೆ? ನಾನು ಯಾರ್ಯಾರೊಂದಿಗೆ ಯುದ್ಧಮಾಡಬೇಕು ಎಂಬುದನ್ನು ನೋಡಬೇಕಾಗಿದೆ. ಆದ್ದರಿಂದ ಎರಡು ಸೈನ್ಯದ ಮಧ್ಯದಲ್ಲಿ ನನ್ನ ಈ ರಥವನ್ನು ಸ್ಥಾಪಿಸು ಎಂದು ಹೇಳುತ್ತಾನೆ. ಅರ್ಜುನನ ಮಾತಿಗೆ ಅನುಗುಣವಾಗಿ ಶ್ರೀಕೃಷ್ಣನು ಎರಡು ಸೈನ್ಯದ ಮಧ್ಯದಲ್ಲಿ ರಥವನ್ನು ನಿಲ್ಲಿಸಿ ಎಲ್ಲರನ್ನೂ ನೋಡು ಎಂದು ಹೇಳಿದನು. ತನ್ನ ಪಿತಾಮಹನಾದ ಭೀಷ್ಮ, ಯುದ್ಧಕ್ಕೆ ಬಂದಿರುವ ಆಚಾರ್ಯರಾದ ದ್ರೋಣ, ಕೃಪರು, ದಾಯಾದಿಗಳಾದ ಕೌರವರು ಇವರೇ ಮೊದಲಾದ ಸಮಗ್ರ ಬಂಧುಬಳಗಗಳನ್ನು ನೋಡಿದಾಗ ಅರ್ಜುನನಿಗೆ ವಿಲಕ್ಷಣವಾದ ಬಂಧುಮೋಹವು ಉಂಟಾಯಿತು. ಈ ಮೋಹದಿಂದಾಗಿ ದುಃಖ ಉಂಟಾಯಿತು. ಬಂಧುಗಳ ಸಂಹಾರದಿಂದ ತನಗೆ ಪಾಪ ಉಂಟಾಗುವುದೆಂದು ತಿಳಿದು, ವಿಷಾದದಿಂದ ಕೂಡಿದವನಾಗಿ ಶ್ರೀಕೃಷ್ಣನನ್ನು ಕುರಿತು ತನ್ನ ಅಂತರಂಗದ ಬೇಗುದಿಯನ್ನು ವಿಷದಪಡಿಸಿದನು.

ಶ್ರೀಕೃಷ್ಣನೇ ನನಗೆ ಮನೋದೌರ್ಬಲ್ಯ ಉಂಟಾಗಿದೆ. ಮೈ ನಡುಗುತ್ತಿದೆ. ದೇಹ ಸುಡುತ್ತಿದೆ. ಕೈಕಾಲುಗಳು ಸೆಟೆದುಕೊಂಡಿವೆ. ನನ್ನ ಕೈಯಿಂದ ಗಾಂಡೀವವು ಜಾರುತ್ತಿದೆ. ನಿಲ್ಲುವಷ್ಟು ಸಾಮರ್ಥ್ಯವೂ ಇಲ್ಲದಂತಾಗಿದೆ. ಪರಾಜಯ ಸೂಚಕ ಶಕುನಗಳು ಕಾಣುತ್ತಿವೆ. ಆದ್ದರಿಂದ ನಾನು ಯುದ್ಧವನ್ನು ಮಾಡಲಾರೆ. ಈ ಯುದ್ಧದಿಂದ ಏನು ಪ್ರಯೋಜನ? ಒಂದು ವೇಳೆ ಯುದ್ಧದಲ್ಲಿ ಜಯ ಸಿಕ್ಕಿದರೂ ಮುಂದೆ ಏನು? ಯಾವ ಬಂಧುಗಳಿಗೋಸ್ಕರ ಈ ರಾಜ್ಯವನ್ನು ಅಪೇಕ್ಷಿಸುತ್ತಿದ್ದೆವೋ ಆ ಬಂಧುಗಳು ನಾಶರಾದ ಮೇಲೆ ಜಯವುಂಟಾಗಿ ರಾಜ್ಯ ಸಿಕ್ಕಿದರೆ ಅದರಿಂದಾಗುವ ಪ್ರಯೋಜನವಾದರೂ ಏನು? ನಮ್ಮವರನ್ನು ಕಳೆದುಕೊಂಡ ದುಃಖದ ಮಡಿಲಿನಲ್ಲಿ ರಾಜ್ಯ ಸ್ಥಾಪನೆಯ ಔಚಿತ್ಯವಾದರೂ ಏನು? ಒಂದು ವೇಳೆ

ಆತನನ್ನು ನಂಬಿ ಕೆಟ್ಟವರಿಲ್ಲ.

ತ್ರೈಲೋಕ್ಯಾಧಿಪತ್ಯ ಸಿಗುವುದಾದರೂ ಅದಕ್ಕೆ ಸಾಧನವಾದ ಬಂಧುಹನನರೂಪವಾದ ಯುದ್ಧವನ್ನೇ ನಾನು ಮಾಡಲಾರೆ. ಹೀಗಿರುವಾಗ ಈ ಅಲ್ಪ ಭೂಮಿಗೋಸ್ಕರ ಇಷ್ಟು ಘೋರತರವಾದ ಪಾಪರೂಪದ ಯುದ್ಧವನ್ನು ನಾನೇಕೆ ಮಾಡಲಿ? ಅಷ್ಟೇ ಅಲ್ಲದೆ ಹಿರಿಯರು ಗುರುಗಳು ಇಲ್ಲದ ಈ ರಾಜ್ಯ ಸುಖದಿಂದ ಲಾಭ ಏನು? ಇಂತಹ ರಾಜ್ಯ ಸಿರಿಯಿಂದ ಐಹಿಕ ಸುಖವಿಲ್ಲ. ಪಾರತ್ರಿಕ ಸುಖವುಂಟೋ? ಎಂದು ಯೋಚಿಸಿದರೆ ಅದೂ ಇಲ್ಲ. ಪೂಜ್ಯರಾದ ಭೀಷ್ಮ ದ್ರೋಣಾದಿಗಳನ್ನು ಸಂಹರಿಸಿ ಆತತಾಯಿಗಳೆಂಬ ಅಪವಾದವನ್ನು ಹೊಂದಿ, ಅಂತಹ ಪಾಪಕ್ಕೆ ಗುರಿಯಾಗಬೇಕಾಗುತ್ತದೆ. ಈ ಪಾಪದಿಂದ ಪರತ್ರ ದುಃಖವನ್ನೇ ಅನುಭವಿಸಬೇಕಾಗುತ್ತದೆ. ಸುಖವನ್ನು ಅನುಭವಿಸುವ ಆಸೆಯು ಲವಲೇಶವೂ ಇಲ್ಲ. ಯುದ್ಧದಿಂದ ನಮ್ಮ ಕುಲವೇ ನಷ್ಟವಾಗುತ್ತದೆ. ಕುಲಕ್ಷಯದಿಂದ ಕುಲಧರ್ಮಗಳು ನಷ್ಟವಾಗಿ ಅಧರ್ಮವು ತಾಂಡವವಾಡುತ್ತದೆ. ಇದರಿಂದ ಸ್ತ್ರಿಯರು ದುಷ್ಟರಾಗುತ್ತಾರೆ. ಇಂತಹ ಸ್ತ್ರಿಯರಿಂದಾಗಿ ವರ್ಣಸಾಂಕರ್ಯವು ಉಂಟಾಗುತ್ತದೆ. ಇಂತಹ ವರ್ಣಸಂಕರದಿಂದಾಗಿ ಪಿತೃಗಳಿಗೆ ಪಿಂಡೋದಕಗಳು ಮುಟ್ಟದೆ ಇರುವ ಪಾಪಕ್ಕೆ ನಾವು ಹೊಣೆಯಾಗಬೇಕಾಗುತ್ತದೆ. ಇಂತಹ ಘೋರ ಅನ್ಯಾಯದಿಂದಾಗಿ ನಾವು ನರಕವನ್ನು ಅನುಭವಿಸಬೇಕಾಗುತ್ತದೆ. ಇಷ್ಟೆಲ್ಲಾ ವಿಪ್ಲವ ಇರುವುದರಿಂದ ಇಂತಹ ಯುದ್ಧವನ್ನು ಮಾಡದಿರುವುದೇ ಲೇಸು. ಇದನ್ನೆಲ್ಲಾ ಅಲೋಚಿಸಿಯೇ ನಾನು ಒಂದು ನಿರ್ಣಯಕ್ಕೆ ಬಂದಿದ್ದೇನೆ, ಶ್ರೀಕೃಷ್ಣ. ನಾನು ಶಸ್ತ್ರವನ್ನು ಪರಿತ್ಯಾಗ ಮಾಡುತ್ತೇನೆ. ನನ್ನನ್ನು ದುರ್ಯೋಧನಾದಿಗಳು ಬಂದು ಸಂಹರಿಸಿದರೂ ಅಡ್ಡಿಯಿಲ್ಲ. ಅದರಿಂದ ನನಗೆ ಕ್ಷೇಮವೇ. ಯಾಕೆಂದರೆ ಇಹದಲ್ಲಿ ಬಂಧುಗಳ ಹತ್ಯಾರೂಪಾವಾದ ಪಾಪವು ಇರುವುದಿಲ್ಲ. ಪರದಲ್ಲಿ ಯುದ್ಧಭೂಮಿಯಲ್ಲೇ ಮೃತನಾದುದರಿಂದ ಸ್ವರ್ಗಸುಖವು ಸಿಗಬಹುದು. ಆದ್ದರಿಂದ ಇಂತಹ ಪಾಪಸಾಧನವಾದ ಈ ಯುದ್ಧವನ್ನು ನಾನು ಖಂಡಿತವಾಗಿಯೂ ಮಾಡಲಾರೆ ಎಂದು ಹೇಳಿ ಆಯುಧವನ್ನು ಕೆಳಗಿಟ್ಟು, ಮೌಢ್ಯವನ್ನು ಹೊಂದಿದವನಾಗಿ ಶ್ರೀಕೃಷ್ಣ ಪರಮಾತ್ಮನಲ್ಲಿ ಶಿಷ್ಯಭಾವದಿಂದ ಮೊರೆ ಹೊಂದಿದನು. ನನ್ನ ಮನಸ್ಸು ಅಲ್ಲೋಲ ಕಲ್ಲೋಲವಾಗಿದೆ ನಾನು ಏನು ಮಾಡಬೇಕೆಂಬುದು ನನಗೆ ಗೊತ್ತಾಗುತ್ತಿಲ್ಲ. ಆದ್ದರಿಂದ ನನ್ನ ಮೌಢ್ಯವನ್ನು ಪರಿಹರಿಸಿ ನನ್ನನ್ನು ಉದ್ಧಾರಮಾಡಬೇಕೆಂದು ದುಃಖಸಾಗರದಲ್ಲಿ ನಿಮಗ್ನನಾಗಿ ರಥದ ಮಧ್ಯದಲ್ಲಿ ಕುಳಿತನು. ★

ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು



(40ನೇ ಪುಟದಲ್ಲಿ...)

ಪ್ರವಚನ ಮಾಲಿಕೆ

ಭಾಗ–9

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹಃ ಕೃಷ್ಣಾ

ವಿದುರನು ಧೃತರಾಷ್ಟ್ರನಿಗೆ ಆರ್ಥಿಕ ವಿಚಾರವನ್ನು ಒಬ್ಬನೇ ಚಿಂತನೆ ಮಾಡಬೇಡ ಎಂದು ಎಚ್ಚರಿಸುತ್ತಾ ಹಾಗೆಯೇ ಯಾತ್ರೆಗೂ ಒಬ್ಬನೇ ಹೋಗಬೇಡ ಎಂದು ಹೇಳುತ್ತಾನೆ. ಲೌಕಿಕವಾಗಿ ಅರ್ಥೈಸಿಕೊಳ್ಳುವುದಾದರೆ, ದಾರಿಯಲ್ಲಿ ಏನಾದರು ಅನಾಹುತ ಸಂಭವಿಸಿದರೆ ಊರಿಗೆ ತಲುಪಿಸಲು ಯಾರಾದರೂ ಇರುತ್ತಾರೆ. ಆದ್ದರಿಂದ ಲೌಕಿಕ ದಾರಿಯಲ್ಲಿ ಒಬ್ಬನೇ ಸಾಗಬೇಡ, ಆಧ್ಯಾತ್ಮಿಕದ ದಾರಿಯಲ್ಲೂ ಒಬ್ಬನೇ ಹೋಗಬೇಡ ಎಂದು ಅರ್ಥ. 'ಏಕಃ ತಪಸ್ವೀ ದ್ವಿರಧ್ಯಾಯೀ' ಎಂದು ಹಿರಿಯರು ಕೊಟ್ಟ ಮಾತು. ಭಗವಂತನ ದಾರಿಯಲ್ಲಿ ನಾವು ಅಧ್ಯಯನ ಮಾಡುವಾಗ, ಒಬ್ಬನೇ ಹೋಗದೆ ಸಹಪಾಠಿಯನ್ನು ಇಟ್ಟುಕೊಳ್ಳಬೇಕು. ಯಾಕೆಂದರೆ ಅಧ್ಯಯನದಲ್ಲಿ ಪ್ರತಿನಿತ್ಯ ಹೊಸ ಹೊಸ ವಿಚಾರ ಕಾಣಸಿಗುತ್ತದೆ. ಜಪವನ್ನು ಮಾಡಲು ತೊಡಗಿದಲ್ಲಿ ಒಬ್ಬನೇ ಮಾಡಬೇಕು. ಏಕೆಂದರೆ ಅದರಲ್ಲಿ ನಿತ್ಯವೂ ಹೇಳಲಿಕ್ಕೆ ಇರುವುದನ್ನೇ ಹೇಳುವುದು ವಿನಃ ಹೊಸ ವಿಷಯ ಸೇರಿಸಲಿಕ್ಕೆ ಇರುವುದಿಲ್ಲ.

ಇನ್ನು ಎಲ್ಲರೂ ಮಲಗಿದ್ದಾಗ ಒಬ್ಬನೇ ಎಚ್ಚರಿಕೆಯಲ್ಲಿ ಇರಬೇಡ, ನಿದ್ರೆ ಬಾರದಿದ್ದರೂ ಮಲಗಿರುವಂತೆ ನಟಿಸಿಕೊಂಡು ಮಲಗಿಬಿಡು ಎಂದು ಧೃತರಾಷ್ಟ್ರನಿಗೆ ಹೇಳುತ್ತಾನೆ. ಯಾಕೆಂದರೆ, ನಿದ್ರೆ ಬರಲಿಲ್ಲವೆಂದು ಕುಳಿತರೆ ಯಾರಿಗಾದರೂ ಸಂಶಯಕ್ಕೆ ಕಾರಣವಾಗಬಹುದು. ಇಲ್ಲದಿದ್ದರೆ ಕುಳಿತವನಿಗೆ ಬೇಡದಿದ್ದ ಯೋಚನೆ ಬರಬಹುದು. ಅಥವಾ ಹೊರಗಡೆ ಹೋದಲ್ಲಿ ಆರಕ್ಷಕರು ಹಿಡಿಯುವ ಪ್ರಸಂಗ ಬರಬಹುದು. ಧೃತರಾಷ್ಟ್ರನೇ ಸಾಮಾಜಿಕ ನೀತಿ ನಿಯಮಗಳಲ್ಲಿ ಎಲ್ಲರೂ ಒಂದು ದಾರಿಯಲ್ಲಿ ಹೋಗುತ್ತಾ ಇದ್ದರೆ, ನೀನು ಮಾತ್ರ 'ಮುರಾರೇಃ ತೃತೀಯಃ ಪಂಥಾಃ' ಎಂದು ಬೇರೆ ದಾರಿಯಲ್ಲಿ ಹೋಗಬೇಡ. ಒಂದೇ ಕಣ್ಣಿರುವಂತಹ ಜನರ ಊರಿಗೆ ಒಬ್ಬ ಎರಡು ಕಣ್ಣಿನವನು ಹೋಗುವಾಗ ತನ್ನ ಒಂದು ಕಣ್ಣನ್ನು ಸೇರಿಸಿಕೊಂಡು ತಲೆಗೆ ರುಮಾಲು ಕಟ್ಟಿ ಹೋಗು ಎಂದು ಹೇಳುತ್ತಾರೆ. ಇದರ ಮೂಲಕ ತನಗೂ ಒಂದೇ ಕಣ್ಣು ಎಂದು ತೋರಿಸಿಕೊಂಡಂತಾಯಿತು. ಉಪನಿಷತ್‌ನಲ್ಲಿ ಒಂದು ಮಾತು ಹೇಳುತ್ತಾರೆ. **'ಯಥಾ ತೇ ತತ್ರ ವರ್ತೇರನ್ ತಥಾ ತತ್ರ ವರ್ತೇಥಾಃ ।'** ನಾವು ಒಂದು ಕ್ಷೇತ್ರಕ್ಕೆ ಹೋದಲ್ಲಿ ನಮ್ಮ ಆಚಾರಕ್ಕೂ, ಆ ಕ್ಷೇತ್ರದ ಆಚಾರಕ್ಕೂ ವ್ಯತ್ಯಾಸ ಬಂದರೆ, ನಮ್ಮ ಆಚಾರವನ್ನು ಬದಿಗಿಟ್ಟು ಆ ಕ್ಷೇತ್ರದ ಬಹಳಷ್ಟು

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**

ಜನರು ಆಚರಣೆ ಮಾಡುವ ರೀತಿಯನ್ನು ನಾವು ಅನುಸರಿಸಿಕೊಂಡು ಇರುವುದೇ ಉಪನಿಷತ್ತಿನ ಸಂದೇಶ. ಎಲ್ಲರೂ ಒಂದು ಕ್ರಮದಲ್ಲಿ ನಡೆಯುವಾಗ ನಿನ್ನದು ಬೇರೆ ಎನ್ನತಕ್ಕಂತಹ ಕ್ರಮ ಬೇಡ. ನಮ್ಮ ಉಡುಪಿಯಲ್ಲಿ ಕೃಷ್ಣಾಷ್ಟಮೀ, ಪರ್ವಕಾಲದಂದು ಬಹಳಷ್ಟು ಜನರು ಬರುತ್ತಾರೆ. ಅದರಲ್ಲಿ ಕೆಲವರಿಗೆ ಆ ತಿಥಿ, ನಕ್ಷತ್ರ ಮುಗಿಯುವವರೆಗೆ ಉಪವಾಸ. ಆದರೆ ಉಡುಪಿಯಲ್ಲಿ ಅದು ಇಲ್ಲವಾದ್ದರಿಂದ ಉಡುಪಿಯ ಆಚರಣೆಯನ್ನು ಅನುಸರಿಸಿಕೊಂಡು ಹೋದರೆ ಅವರಿಗೆ ಶ್ರೇಯಸ್ಸಾಗುತ್ತದೆ. ಆದ್ದರಿಂದ ಎಲ್ಲರೂ ನಿದ್ದೆ ಮಾಡಿಕೊಂಡಿದ್ದರೆ ಬಲಾತ್ಕಾರವಾಗಿಯಾದರು ಕಣ್ಣುಮುಚ್ಚಿ ಮಲಗಿಕೊಳ್ಳಬೇಕು. ಸಮಾಜದಲ್ಲಿ ವ್ಯಕ್ತಿಗಳು, ಸಜ್ಜನರು ಹೇಗೆ ಹೋಗುತ್ತಾರೋ ಅದಕ್ಕೆ ಅನುಗುಣವಾಗಿ ಹೋಗುವುದನ್ನು ಕಲಿತುಕೋ ಎಂದು ವಿದುರನು ಧೃತರಾಷ್ಟ್ರನ ಮೂಲಕ ಸಮಾಜಕ್ಕೆ ಎಚ್ಚರಿಕೆ ಕೊಡುತ್ತಾನೆ.

**ಪರಂ ಕ್ಷಿಪತಿ ದೋಷೇಣ ವರ್ತಮಾನಃ ಸ್ವಯಂ ತಥಾ ।**
**ಯಶ್ಚ ಕ್ರುಧ್ಯತ್ಯನೀಶಾನಃ ಸ ಚ ಮೂಢತಮೊ ನರಃ ॥**

ತನ್ನಲ್ಲಿ ದೋಷ ಇದ್ದುಕೊಂಡು ಇನ್ನೊಬ್ಬರ ಕಡೆಗೆ ಬೆಟ್ಟು ತೋರಿಸುವ ಸ್ವಭಾವದವನನ್ನು ಮೂರ್ಖ ಎಂದು ಕರೆಯುತ್ತಾರೆ. ಇಂತಹವನಿಗೆ ತನ್ನನ್ನು ತಿದ್ದಿಕೊಳ್ಳಬೇಕೆಂಬ ವಿಚಾರ ಬರುವುದೇ ಇಲ್ಲ. ಇದಕ್ಕೆ ಮೊದಲಿನ ಉದಾಹರಣೆಯೇ ಧೃತರಾಷ್ಟ್ರ. ತಾನು ಸ್ವಯಂ ದೋಷಿಯಾಗಿದ್ದು ಪಾಂಡವರ ಮೇಲೆ ಟೀಕೆ ಟಿಪ್ಪಣಿ ಮಾಡುತ್ತಿರುತ್ತಾನೆ. ಉಪನಿಷತ್ತಿನ ಒಂದು ಮಾತು ಹೀಗಿದೆ.

**'ಪರಾಂಚಿ ಖಾನಿ ವ್ಯತೃಣತ್ ಸ್ವಯಂ ಭೂಃ ತಸ್ಮಾತ್ ಪರಾಕ್ ಪಶ್ಯತಿ ನ ಅಂತರಾತ್ಮನ್'**

ನಾವೀಗ ಸ್ವಯಂ ನಮ್ಮನ್ನು ವಿಮರ್ಶೆ ಮಾಡುವ ಹಂತದಲ್ಲಿ ಇಲ್ಲ. ಯಾಕೆಂದರೆ ಚತುರ್ಮುಖ ಬ್ರಹ್ಮನು ನಮ್ಮನ್ನು ಮತ್ತು ನಮ್ಮ ಇಂದ್ರಿಯಗಳನ್ನು ಸೃಷ್ಟಿಸುವಾಗ ಎಲ್ಲವನ್ನು ಬಹಿರ್ಮುಖಿಗಳನ್ನಾಗಿ ಸೃಷ್ಟಿಸಿದ್ದಾನೆ. ಆದ್ದರಿಂದ ನಮ್ಮ ಕಣ್ಣು ಇನ್ನೊಬ್ಬರನ್ನು ನೋಡುತ್ತದೆ, ಕಿವಿ ಇನ್ನೊಬ್ಬರ ಬಗ್ಗೆ ಕೇಳುತ್ತದೆ. ಕೈಕಾಲು ಇನ್ನೊಂದರ ಕಡೆಗೆ ಮುಟ್ಟುವುದಕ್ಕೆ, ನಡೆಯುವುದಕ್ಕೆ ಹೋಗುತ್ತದೆ ವಿನಃ ಒಳಗಿನಿಂದ ಮುಟ್ಟೋಣ, ಒಳಗಿನದ್ದನ್ನು ನೋಡೋಣ, ಒಳಗಿನ ಬಗ್ಗೆ ಕೇಳೋಣ ಎನ್ನತಕ್ಕಂತಹ ವಿಚಾರ ನಮ್ಮಲ್ಲಿ ಇಲ್ಲವಾಯಿತು.

ದೇವರು ಯಾರದ್ದೂ ತಂಟೆ, ಕೀಟಲೆ ಬೇಡವೆಂದು ಮನುಷ್ಯರು ಇರದ ಜಾಗವನ್ನು ಹುಡುಕುತ್ತಾ ಗೌರಿ ಶಂಕರ ಪರ್ವತ, ಸಮುದ್ರದೊಳಗೆ, ಚಂದ್ರಲೋಕಕ್ಕೆ ಹೋದನು. ಆದರೆ ಅವನಿಗೆ ಅಂತಹ ಜಾಗ ಸಿಗಲಿಲ್ಲವಂತೆ. ಕೊನೆಗೆ ಬ್ರಹಸ್ಪತಿಯು ಪ್ರತಿಯೊಬ್ಬನ

(26ನೇ ಪುಟದಲ್ಲಿ.......)

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ
ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಮಂದ್ರ, ಮಧ್ಯ, ತಾರಕ ಎಂಬ ಮೂರು ರೀತಿ ಇದೆ. ಅಲ್ಲದೆ ಸಂಗೀತದಲ್ಲಿ ಏಳು ಸ್ವರಗಳಿವೆ. ಏಳು ಛಂದಸ್ಸುಗಳಿವೆ. ಗಾಯತ್ರಿಯನ್ನು ಷಡ್ಜದಲ್ಲಿ, ಬೃಹತಿಯನ್ನು ಮಧ್ಯಮದಲ್ಲಿ (ಪಂಕ್ತಿಯ) ಜಗತಿಯನ್ನು ನಿಷಾಧ ಸ್ವರದಲ್ಲಿ ಹೇಳುತ್ತಾರೆ. ಇದಿಷ್ಟು ಸ್ವರದ ಬಗ್ಗೆ ಹೇಳಿದ್ದಾಯಿತು. ಮಾತ್ರೆಯ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ. ಮಾತ್ರೆಗಳು ಎಂದರೇನು? ಒಂದು ಮಾತ್ರೆಯ ಸ್ವರ, ಎರಡು ಮಾತ್ರೆಯ ಸ್ವರ ಎಂದು ಯಾವ ಲೆಕ್ಕದಲ್ಲಿ ಪರಿಗಣಿಸಿ ವಿಂಗಡಿಸಿದ್ದಾರೆ? ಹ್ರಸ್ವ, ದೀರ್ಘ, ಪ್ಲುತಗಳು ಹೇಗೆ ಉಂಟಾದವು? ಕೈಯಿಂದ ಕಾಲುಗಂಟಿನ ಸುತ್ತ ಒಂದು ಸುತ್ತು ತಿರುಗಿಸಲು ಬೇಕಾಗುವಷ್ಟು ಹೊತ್ತಿಗೆ ಒಂದು ಮಾತ್ರೆ ಎಂದು ಹೆಸರು. ಶಬ್ದವನ್ನು ಉಚ್ಚರಿಸಲಿಕ್ಕೆ ತೆಗೆದುಕೊಳ್ಳುವ ಸಮಯವನ್ನು ಹೊಂದಿಕೊಂಡು ಹ್ರಸ್ವ, ದೀರ್ಘ, ಪ್ಲುತ, ಒಂದು ಮಾತ್ರೆ, ಎರಡು ಮಾತ್ರೆ, ಮೂರು ಮಾತ್ರೆಯ ಸ್ವರಗಳೆಂದು ವಿಂಗಡಿಸಿದ್ದಾರೆ. ಶಕುನದ ಹಕ್ಕಿ ಕೂಗುವ ವೇಳೆಯನ್ನು ಒಂದು ಮಾತ್ರೆಯಂತಲೂ, ಕಾಗೆ ಕೂಗುವ ಧ್ವನಿಯನ್ನು ಎರಡು ಮಾತ್ರೆಯಂತಲೂ, ನವಿಲು (ಕೇಕೇ) ಕೂಗಲು ತೆಗೆದುಕೊಳ್ಳುವ ಸಮಯವನ್ನು ಮೂರು ಮಾತ್ರೆಯಂತಲೂ ಪರಿಗಣಿಸಿದ್ದಾರೆ. ಹ್ರಸ್ವಕ್ಕೆ ಒಂದು ಮಾತ್ರೆ, ದೀರ್ಘಕ್ಕೆ ಎರಡು ಮಾತ್ರೆ. ಪ್ಲುತಕ್ಕೆ ಮೂರು ಮಾತ್ರೆ. ಮುಂಗುಸಿಯ ಕೂಗನ್ನು 1/2 ಮಾತ್ರೆ ಎನ್ನುತ್ತಾರೆ. ಪದಪಾಠ ಹೇಳುವಾಗ ಒಂದು ಮಾತ್ರೆಯ ಕಾಲ ಅಂತರ ಇರಬೇಕು. ಪೂರ್ವಪದದಿಂದ ಉತ್ತರಪದವನ್ನು ಹೇಳುವಾಗ ಎರಡು ಮಾತ್ರೆಯ ಅಂತರ ಇರಬೇಕು. ಒಂದು ಪಾದದಿಂದ ಇನ್ನೊಂದು ಪಾದ ಹೇಳುವಾಗ ಮೂರು ಮಾತ್ರೆಯ ಅಂತರ ಇರಬೇಕು. ಶಬ್ದ ವಿಂಗಡನೆ ಮಾಡುವಾಗ 1/2 ಮಾತ್ರೆಯ ಕಾಲ ಅಂತರ ಇದ್ದರೆ ಸಾಕು.

ಛಂದಸ್ಸು ತಿಳಿಯಬೇಕಾದರೆ ಲಘು, ಗುರುಗಳನ್ನು ತಿಳಿಯಬೇಕು. ಇದನ್ನು ತಿಳಿಯಬೇಕಾದರೆ ಸ್ವರಗಳನ್ನು ತಿಳಿದಿರಬೇಕು. ಓಂಕಾರವನ್ನು ಯಾವ ಸ್ವರದಲ್ಲಿ ಹೇಳಬೇಕು ಎಂದು ಹಲವರು ಹಲವು ರೀತಿಯಲ್ಲಿ ಹೇಳಿದ್ದಾರೆ. ಶೈತ್ಯಾಯನರು ಓಂಕಾರವನ್ನು ಮೂರು ರೀತಿಯಲ್ಲಿ ಹೇಳಬಹುದು ಎಂದು ಹೇಳಿದ್ದಾರೆ. ಕೌಂಡಿನ್ಯ ಋಷಿ ಓಂಕಾರವನ್ನು ಯಥಾಸ್ಥಿತಿಯಲ್ಲಿ ಹೇಳಬೇಕೆಂದು ಹೇಳಿದ್ದಾರೆ. ವಾಲ್ಮೀಕಿ ಉದಾತ್ತವಾಗಿ ಹೇಳಬೇಕು ಎಂದು

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

ಹೇಳಿದ್ದಾರೆ. ಮಾತ್ರೆ ಎಂಬುವುದಕ್ಕೆ ಒಂದು ವಿಶಿಷ್ಟವಾದ ಅರ್ಥ ಇದೆ. ವೇದವನ್ನು ಕಲಿಸುವಾಗ ಒಂದೇ ಸಲಕ್ಕೆ ಗದ್ಯ ಹೇಳಿದ ಹಾಗೆ ಕಲಿಸುವುದಿಲ್ಲ. ಅದಕ್ಕೆ ಒಂದು ಕ್ರಮ ಇದೆ. ಮಾತ್ರೆ ಎಂದರೆ ಪ್ರಶ್ನೆ. ಮೂರು ಮಂತ್ರಕ್ಕೆ ಒಂದು ಪ್ರಶ್ನೆ. ಒಂಭತ್ತು ಮಂತ್ರಗಳಿಂದ ಒಂದು ವರ್ಗ ಕೂಡಿದ್ದರೆ ಅದನ್ನೇ ಮೂರು ಸಲ ಹೇಳಬೇಕು. ಹತ್ತು ಇದ್ದರೆ ಮೂರು + ಮೂರು + ನಾಲ್ಕು ಹೀಗೆ. ಪ್ರಶ್ನೆಗಳಾಗಿ ಮಾಡಿಕೊಂಡು ಪಠಿಸಬೇಕು. ಹತ್ತಕ್ಕಿಂತ ಹೆಚ್ಚಿದ್ದರೆ ಎರಡೆರಡು ಮಂತ್ರಗಳನ್ನು ಪ್ರಶ್ನೆಗಳಾಗಿ ತೆಗೆದುಕೊಂಡು ಪಠಿಸಬೇಕು. ಹೀಗೆ ಒಂದು ಅಧ್ಯಾಯದಲ್ಲಿ ಹೆಚ್ಚು ಕಡಿಮೆ ಅರುವತ್ತು ಪ್ರಶ್ನೆಗಳಿರುತ್ತವೆ. ಹೀಗೆ ಋಗ್ವೇದದ ಎಂಟು ಅಷ್ಟಕಗಳಲ್ಲಿ ಮೂರುಸಾವಿರದ ಎಂಟನೂರ ನಲ್ವತ್ತು ಪ್ರಶ್ನೆಗಳು ಅಡಕವಾಗಿವೆ.

ಶೀಕ್ಷಾಶಾಸ್ತ್ರದ ಸ್ವರ  ವರ್ಣ ಹಾಗೂ ಮಾತ್ರಾ ಎಂದು ಮೂರು ಮುಖಗಳನ್ನು ಪರಿಶೀಲಿಸಿದ ನಂತರ ನಾಲ್ಕನೇ ಮುಖ 'ಬಲಂ' ಎಂಬುವುದರ ಬಗ್ಗೆ ಉಪನಿಷತ್ತು ಈಗ ಹೇಳುತ್ತದೆ. ಬಲ ಎಂದರೇನು? ಶೀಕ್ಷಾಶಾಸ್ತ್ರವು ಯಾವ ಬಲದ ಬಗ್ಗೆ ಹೇಳುತ್ತದೆ? ಯಾವುದಾದರು ವರ್ಣ, ಅಕ್ಷರವನ್ನು ಉಚ್ಚರಿಸಬೇಕಾದರೆ ನಾವು ಪ್ರಯತ್ನವನ್ನು ಮಾಡಲೇಬೇಕು. ನಮಗೆ ಗೊತ್ತಾಗದೆ ಒಳಗಿನಿಂದ ಒಂದು ಪ್ರಯತ್ನ ನಡೆಯುತ್ತದೆ. ಯಾಂತ್ರಿಕವಾಗಿ ನಾವು ಮಾತಾಡುತ್ತಿದ್ದೆವೆ, ಮಾತಾಡಲಿಕ್ಕೆ ಏನೂ ಪ್ರಯತ್ನ ಮಾಡಬೇಕಿಲ್ಲ ಎಂದು ಎನಿಸಿದರೂ ಪ್ರಯತ್ನ ಮಾಡದೆ, ಯಾವ ಕೆಲಸವೂ ಆಗುವುದಿಲ್ಲ. ಸ್ವರವನ್ನು ಉಚ್ಚಾರ ಮಾಡಬೇಕಾದರೆ ಬೇರೆ ಬೇರೆ ರೀತಿಯ ಪ್ರಯತ್ನಗಳನ್ನು ಇಂದ್ರಿಯಗಳು ಮಾಡುತ್ತವೆ. ಸರಿಯಾದ ಉಚ್ಚಾರ ಗೊತ್ತಿರದ ಕಾರಣ ಅಥವಾ ಸರಿಯಾದ ಪ್ರಯತ್ನ ಮಾಡದ ಕಾರಣ ತಪ್ಪು ಉಚ್ಚಾರ ಉಂಟಾಗುತ್ತದೆ. ಉದಾಹರಣೆಗೆ ಕೆಲವರು ಫಲವನ್ನು 'Fhala'ಎಂದು ತಪ್ಪಾಗಿ ಉಚ್ಚಾರಿಸುತ್ತಾರೆ. ಯಾವ ಅಕ್ಷರವನ್ನು ಯಾವ ರೀತಿಯ ಪ್ರಯತ್ನದಿಂದ ಉಚ್ಚರಿಸಬೇಕು ಎಂಬುವುದು ಗೊತ್ತಿರಬೇಕು. ಬಲ ಎಂದರೆ effort ಪ್ರಯತ್ನ. ಈ ಪ್ರಯತ್ನಗಳಲ್ಲಿ ಎರಡು ವಿಧ. ಒಂದು ಒಳಗಿನ ಪ್ರಯತ್ನ. ಎರಡನೆಯದ್ದು ಬಾಹ್ಯ ಪ್ರಯತ್ನ. ಸ್ವರ ಮೊದಲು ಉತ್ಪನ್ನವಾಗುವುದು ನಾಭಿಯಿಂದ. ಅದು ನಮಗೆ ಗೊತ್ತಾಗುವುದಿಲ್ಲ. ಅದೇ ಸ್ವರ ಕಂಠಕ್ಕೆ ಬಂದಾಗ ನಮಗೆ ಗೊತ್ತಾಗುತ್ತದೆ. ಸ್ವರದ ಉಚ್ಚಾರ ಮಾಡಲಿಕ್ಕೆ ನಾಲಿಗೆ, ತುಟಿ, ಮೂಗು ಹೀಗೆ ಹಲವು ಇಂದ್ರಿಯಗಳ ಪ್ರಯತ್ನ ಮುಖ್ಯ. ಉಚ್ಚರಿಸುವಾಗ ಯಾವ ಭಾಗವನ್ನು ಯಾವ ಭಾಗದಿಂದ ಸ್ಪರ್ಶಿಸಿ ಉಚ್ಚರಿಸಬೇಕು ಎಂಬ ನಿಯಮದಿಂದ ಈ ವಿಂಗಡನೆಯನ್ನು ಮಾಡಿದ್ದಾರೆ. **(ಸಶೇಷ)**

**ಪ್ರತಿದಿನ ಆತನನ್ನು ಪೂಜಿಸಬೇಕು**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಇಂದು ಈ ಜನ್ಮದಲಿ ನೀನೇ**
**ಬಂಧು, ಹಿಂದಣ ಜನ್ಮದಲಿ ಬಳಿ**
**ಸಂದು, ಮುಂದಣ ಜನ್ಮಕಧಿಪತಿಯಾಗಿ ಇರುತಿರಲು ।**
**ಎಂದಿಗೂ ಎನಗಿಲ್ಲ ತನುಸಂ**
**ಬಂಧ ನಿನ್ನದು, ಎನಗೆ ನೀ ಗತಿ**
**ಯೆಂದು ಬಿನ್ನೈಸಿದೆನು ರಕ್ಷಿಸು ನಮ್ಮನನವರತ ॥೬೧॥**

ಇಂದು ಈ ಜನ್ಮದಲ್ಲಿ ನೀನೇ ನನಗೆ ಬಂಧು. ಹಿಂದಿನ ಜನ್ಮದಲ್ಲಿಯೂ ನನ್ನ ಬಳಿ ಇದ್ದು ಮುಂದಿನ ಜನ್ಮಕ್ಕೂ ಹೀಗೆ ನೀನೆ ಅಧಿಪತಿಯಾಗಿರಲು ತನುಸಂಬಂಧ ಎಂದಿಗೂ ಎನಗೆ ಇಲ್ಲ, ಅದು ನಿನ್ನದೆ. ಎನಗೆ ನೀನೇ ಗತಿ ಎಂದು ಬಿನ್ನೈಸಿದ್ದೇನೆ, ಹರಿ, ನಮ್ಮನ್ನು ಸದಾ ಕಾಪಾಡು.

## ಇಂದು ಈ ಜನ್ಮದಲಿ ನೀನೇ ಬಂಧು

ಇಂದು ಈ ಜನ್ಮದಲ್ಲಿ ಹೆತ್ತು ಹೊತ್ತ ತಾಯಿ ತಂದೆಗಳಾಗಲಿ ಬೇರೆ ಬಂಧುಗಳಾಗಲಿ ನನ್ನ ಕಷ್ಟಕಾಲದಲ್ಲಿ ಯಾರೂ ರಕ್ಷಣೆ ನೀಡುವುದಿಲ್ಲ. ಅದು ಅವರಿಗೆ ಶಕ್ಯವಲ್ಲ. ಅವರು ಅಯ್ಯೋ ಎಂದು ಕಣ್ಣೀರು ಸುರಿಸಬಲ್ಲರು. ಸಮಾಧಾನದ ಮಾತುಗಳನ್ನಾಡಬಲ್ಲರು. ಹೆಚ್ಚೇನೂ ಮಾಡಲಾರರು. ಎಲ್ಲ ಸಂಕಟದಿಂದ ಪಾರು ಮಾಡುವವನು ವೆಂಕಟರಮಣನೆ ಸರಿ.

## ಹಿಂದಣ ಜನ್ಮದಲಿ ಬಳಿ ಸಂದು ಮುಂದಣ ಜನ್ಮಕಧಿಪತಿಯಾಗಿ

ಈ ಜನ್ಮದಲ್ಲಿ ನಮ್ಮ ಜೊತೆಗೆ ಬಂಧುಗಳು ಅನೇಕರಿದ್ದಾರೆ. ಹಿಂದಿನ ಜನ್ಮದಲ್ಲಿ ಅವರು ಯಾರೋ, ನಾವು ಯಾರೋ! ಹಾಗೇ ಮುಂದಿನ ಜನ್ಮದಲ್ಲಿಯೂ ಅರವಟ್ಟಿಗೆಯಲ್ಲಿ ನೀರು ಕುಡಿಯಲು ಯಾತ್ರಿಕರು ಒಮ್ಮೆ ಜೊತೆ ಸೇರುತ್ತಾರೆ. ಅದಕ್ಕೆ ಹಿಂದೆ ಅವರಾರೋ ನಾವಾರೋ. ನೀರು ಕುಡಿದಾದ ಬಳಿಕವೂ ಅವರೆಲ್ಲೋ ನಾವೆಲ್ಲೋ. **'ಸನ್ನಿವಾಸಂ ಸುಹೃದಾಂ**

ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.

**ಪ್ರಪಾಯಾಮಿವಗಚ್ಛತಾಂ'** ಎಂದು ಭಾಗವತ ಈ ಉದಾಹರಣೆಯನ್ನು ನೀಡಿದೆ. ಅದೇ ರೀತಿ ಈ ಜನ್ಮದಲ್ಲಿ ಬಂಧುಗಳನ್ನು ಒದಗಿಸಿ ಕೊಟ್ಟವನು ಪರಮಾಪ್ತ ಬಂಧು ಹರಿಯೆ. ಅವನೇ ಹಿಂದಿನ ಮುಂದಿನ ಜನ್ಮಗಳಲ್ಲಿ ಬೇರೆ ಬಂಧುಗಳನ್ನು ಒದಗಿಸಿ ಕೊಟ್ಟಿದ್ದಾನೆ, ಕೊಡಲಿದ್ದಾನೆ.

ಈ ಜನ್ಮದ ತಂದೆತಾಯಿಗಳು ಹಿಂದಿನ ಜನ್ಮದಲ್ಲಿ ಮುಂದಿನ ಜನ್ಮದಲ್ಲಿ ಸಿಕ್ಕಿಲ್ಲ. ಸಿಗುವುದೇ ಇಲ್ಲವೆಂದಿಲ್ಲ, ಕೆಲವೊಮ್ಮೆ ಸಿಗಬಹುದು. ಅದು ಆಕಸ್ಮಿಕ. ನಾವಾಗಲಿ ಅವರಾಗಲಿ ಬಯಸಿ ಬೇಡಿ ಪಡೆದುದಲ್ಲ. ಇದಕ್ಕೂ ಭಾಗವತ ಒಂದು ಉದಾಹರಣೆ ನೀಡಿದೆ. **'ಸ್ರೋತೋವೇಗೇನ ವಾಲುಕಾಃ ಸಂಯುಜ್ಯಂತೇ ವಿಯುಜ್ಯಂತೇ'** ಎಂದು. 'ನೀರಿನ ಪ್ರವಾಹದಲ್ಲಿ ಮಳಲಿನ ಕಣಗಳು ಕೊಚ್ಚಿ ಹೋಗುವಾಗ ಅದು ಕೆಲವೊಮ್ಮೆ ಆಕಸ್ಮಿಕವಾಗಿ ಒಂದರೊಡನೆ ಇನ್ನೊಂದು ಜೊತೆಗೂಡಬಹುದು. ಒಡನೆ ಬೇರೆಯಾಗಬಹುದು.

## ಎಂದಿಗೂ ಎನಗಿಲ್ಲ ತನು ಸಂಬಂಧ ನಿನ್ನದು

ನಾನು ಈ ತಂದೆತಾಯಿ ಬಂಧುಬಳಗಗಳ ಶರೀರ ಸಂಬಂಧವನ್ನು ಅಂದರೆ ರಕ್ತ ಸಂಬಂಧವನ್ನು ನನಗಾಗಿ ನಾನಾಗಿ ಪಡೆಯಲಿಲ್ಲ. ಎಲ್ಲವೂ ನಿನ್ನಿಚ್ಛೆ ಎಂದ ಮೇಲೆ ಅದು ನಿನ್ನದೆ, ನನಗೆ ಏನಿಲ್ಲ. ನನಗೆ ನಿನ್ನೊಂದಿಗಿರುವ ಆತ್ಮ ಸಂಬಂಧ ಒಂದೇ ಶಾಶ್ವತ. ಅದರಿಂದ ನೀನೆ ಗತಿಯೆಂದು ನಿನಗೆ ನಾನು ಭಿನ್ನೈಸಿದೆನು. ಅಥವಾ–

## ಈ ಜನ್ಮದಲ್ಲಿ ನೀನೇ ಬಂಧು

ಈ ಜನ್ಮದಲ್ಲಿ ನನಗೆ ಶರೀರ ಕೊಟ್ಟವನು, ಈ ಶರೀರದಲ್ಲಿ ನನ್ನನ್ನು ಪ್ರವೇಶ ಮಾಡಿಸಿದವನು, ನೀನೆ. ತಂದೆ ತಾಯಿಗಳಲ್ಲ, ಬೇರೆ ಬಂಧುಗಳೂ ಅಲ್ಲ. ಅದರಿಂದ ಶರೀರ ಕೊಟ್ಟವನು, ಶರೀರದೊಳಗೇ ನನ್ನ ಜೊತೆಗಿರುವವನು ಬಂಧು ನೀನೆ. ಹಾಗೇ ಹಿಂದಿನ ಜನ್ಮದ ಶರೀರವನ್ನು ನಾನು ಬಿಟ್ಟು ನಾನಾ ಯೋನಿಗಳಲ್ಲಿ ಸುತ್ತಿ ಈ ಜನ್ಮದ ಶರೀರದಲ್ಲಿ ಪ್ರವೇಶಿಸುವವರೆಗೂ ನನ್ನ ಜೊತೆಗಿದ್ದ ಬಂಧುವು ನೀನೆ. ಈ ಜನ್ಮದ ತಂದೆ ತಾಯಿ ಮುಂತಾದವರು ಯಾರೂ ನನ್ನ ಜೊತೆಗಿರಲಿಲ್ಲ. ಅವರು ಅವರವರ ಕರ್ಮಾನುಸಾರ ಬೇರೆ ಲೋಕಗಳಲ್ಲಿದ್ದರು. ಅವರೆಲ್ಲೋ ನಾನೆಲ್ಲೋ!

**ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.**

## ಹಿಂದಿನ ಜನ್ಮದಲಿ ಬಳಿಸಂದು ಮುಂದಣ ಜನ್ಮಕಧಿಪತಿಯಾಗಿ ಇರುತಿರಲು

ಈ ಜನ್ಮದಲ್ಲಿ ಹೇಗೋ ಹಾಗೆ ಹಿಂದಿನ ಜನ್ಮದಲ್ಲಿಯೂ ಮುಂದಿನ ಜನ್ಮದಲ್ಲಿಯೂ ನಡೆದಿತ್ತು ನಡೆಯುತ್ತದೆ. ಒಂದು ಶರೀರ ಬಿಟ್ಟು ಇನ್ನೊಂದನ್ನು ಪ್ರವೇಶಿಸುವ ಸಂಕ್ರಮಣ ಕಾಲದಲ್ಲಿ ನಮ್ಮ ಜೊತೆಗೆ ಯಾರೂ ಇಲ್ಲ, ಹರಿಯೊಬ್ಬನೇ ಇರುತ್ತಾನೆ.

ಯಾರಿಗೆ ಯಾರುಂಟು ಎರವಿನ ಸಂಸಾರ ।
ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೆ ॥

ತಂದೆತಾಯಿ ಮುಂತಾದ ರಕ್ತ ಸಂಬಂಧ ನೀರ ಮೇಲಣಗುಳ್ಳೆಯಂತೆ ಅಶಾಶ್ವತ.

## ಎಂದಿಗೂ ಎನಗಿಲ್ಲ ತನು ಸಂಬಂಧ ನಿನ್ನದು

ಶರೀರವನ್ನು ಪ್ರವೇಶಿಸುವ ಮೊದಲು ಆ ಶರೀರ ನನ್ನದಲ್ಲ, ಅದು ಇರಲೇ ಇಲ್ಲ. ಅದನ್ನು ಬಿಟ್ಟು ಹೊರಟು ಹೋದ ಬಳಿಕವೂ ಅದು ನನ್ನದಲ್ಲ. ಶರೀರವನ್ನು ಸೃಷ್ಟಿ ಮಾಡಿದವನೂ ನೀನೇ. ಅದನ್ನು ನಾಶಮಾಡಿದವನೂ ನೀನೇ, ಎಂದ ಮೇಲೆ ಶರೀರದೊಳಗೆ ನಾನಿರುವ ಮೂರು ದಿನದ ಬಾಳಿನಲ್ಲಿ ಈ ಶರೀರ ನನ್ನದೆನ್ನಬಹುದೆ? ಅದರಿಂದ ಈ ತನು ಸಂಬಂಧ, ತನುವಿನ ಮೇಲಿನ ಒಡೆತನದ ಸಂಬಂಧ ಎಂದಿಗೂ ಎನಗಿಲ್ಲ ಅದು ನಿನ್ನದು. ನೀನಿತ್ತ ಯಾವುದೇ ಶರೀರವನ್ನು ಅದು ನನಗೆ ಇಷ್ಟವಾಗಲಿ ಬಿಡಲಿ, ಪಾಲಿಗೆ ಬಂದದ್ದು ಪಂಚಾಮೃತವೆಂದುಕೊಂಡು ನಾನು ಸ್ವೀಕರಿಸಲೇಬೇಕು ಮತ್ತು ಈ ಶರೀರದಲ್ಲಿ ನೀನಿದ್ದು ವಿಷಯಸಾರಭೋಗವನ್ನು ಲೀಲೆಯಿಂದ ಮಾಡುವುದಾಗಲಿ, ಶರೀರಬಿಟ್ಟು ಹೊರಗೆ ನನ್ನನ್ನು ಕರೆದೊಯ್ಯುವುದಾಗಲಿ ನಾನು ಕಾಣಲಾರೆ, **'ವಿಮೂಢಾ ನಾನುಪಶ್ಯಂತಿ'** ಎಂದ ಮೇಲೆ ನೀನು ನನಗಾಗಿ ಶರೀರವನ್ನು ನಿರ್ಮಾಣ ಮಾಡುವುದು. ನಾನು ಶರೀರದಿಂದ ಹೊರಬಂದ ಮೇಲೆ ಅದನ್ನು ನಾಶ ಮಾಡುವುದು, ನನ್ನ ಶರೀರದ ಮೇಲಿನ ಈ ಎಲ್ಲ ಒಡೆತನದ ಸಂಬಂಧವನ್ನು ಮೂಢನಾದ ನಾನೇನು ತಿಳಿಯುತ್ತೇನೆ? ನನಗೆ ನೀನೇ ಗತಿ. ಅಥವಾ–

## ಈ ಜನ್ಮದಲ್ಲಿ ನೀನೇ ಬಂಧು

'ಜನ್ಮ' ಶಬ್ದವನ್ನು ಇಲ್ಲಿ ಇನ್ನೂ ವಿಶಾಲವಾದ ಅರ್ಥದಲ್ಲಿ ತೆಗೆದುಕೊಳ್ಳಬಹುದು. ಬ್ರಹ್ಮ ಸೂತ್ರದಲ್ಲಿ ಭಾಗವತದಲ್ಲಿ **'ಜನ್ಮಾದ್ಯಸ್ಯ ಯತಃ'** ಇಡೀ ಜಗತ್ತಿನ ಜನ್ಮ ಮುಂತಾದುವುಗಳಿಗೆ

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.

ಹರಿಯೇ ಕಾರಣ ಎನ್ನಲಾಗಿದೆ. ಭಾಗವತ ರಚನೆಗೆ ಮೂಲ ಪ್ರೇರಣೆಯಿಂದ ಚತುಃಶ್ಲೋಕೀ ಭಾಗವತದ ಮೊದಲ ಪದ್ಯದ ಭಾವ ಇಲ್ಲಿ ಕಾಣುತ್ತದೆ.

**ಅಹಮೇವಾಸಮಗ್ರೇಚ ನಾನ್ಯದ್ ಯತ್ ಸದಸತ್ ಪರಂ ।**
**ಪಶ್ಚಾದಹಂ ತ್ವಮೇತಚ್ಚ ಯೋಽವಶಿಷ್ಯೇತ ಸೋಽಸ್ಮ್ಯಹಂ ॥**

ಸೃಷ್ಟಿಗೆ ಮೊದಲು ಪ್ರಳಯ ಕಾಲದಲ್ಲಿ ನಾನೇ ಸ್ವತಂತ್ರನಾಗಿದ್ದೆ. ಆ ಸೃಷ್ಟಿ ನಾಶವಾದ ಬಳಿಕ ಪ್ರಳಯಕಾಲದಲ್ಲಿಯೂ ಸ್ವತಂತ್ರನಾಗಿ ಉಳಿಯುವವನು ನಾನೇ. ಎಲ್ಲರೂ ನನ್ನ ಆಧೀನರಾಗಿ ನಿದ್ರಾಪರವಶರಾಗಿರುತ್ತಾರೆ. ಎಚ್ಚೆತ್ತುಕೊಂಡಿರುವವನು ನಾನೊಬ್ಬನೆ, ಎಂದು ಶ್ರೀಹರಿ ಬ್ರಹ್ಮನಿಗೆ ಉಪದೇಶಿಸುತ್ತಾನೆ. ಎಲ್ಲರೂ ಮುಗ್ಧಶಿಶುಗಳಂತೆ ಗಾಢನಿದ್ದೆಯಲ್ಲಿ ಮುಳುಗಿದ್ದ ಆ ಕಾಲ ಎಷ್ಟು ದೀರ್ಘವೆಂದರೆ ಒಂದು ಬ್ರಹ್ಮಾಂಡದ ಆಯುಷ್ಯದಷ್ಟು, ನೂರುವರ್ಷ. ಬ್ರಹ್ಮಮಾನದ ನೂರುವರ್ಷ ಅಂದರೆ, ಎಂಟುನೂರ ಅರವತ್ತನಾಲ್ಕು ಕೋಟಿ ಮನುಷ್ಯಮಾನದ ವರ್ಷಗಳು ಬ್ರಹ್ಮಮಾನದಲ್ಲಿ ಒಂದೇ ದಿವಸ. ಇಂಥ ಮೂವತ್ತಾರುಸಾವಿರ ದಿವಸಗಳಿಂದಾಗುವ ನೂರುವರ್ಷಕಾಲ ಎಲ್ಲ ಚೇತನರೂ ಮಲಗಿರುತ್ತಾರೆ. ಹರಿಯೊಬ್ಬ ಎಚ್ಚೆತ್ತಿರುತ್ತಾನೆ. ಆಗ ಜೀವರಿಗೆ ಯಾವ ಬಂಧುಗಳೂ ಎಚ್ಚರದಿಂದಿರುವುದಿಲ್ಲ. ಯಾರೂ ನಮ್ಮನ್ನು ಮಾತಾಡಿಸುವುದಿಲ್ಲ. ಹರಿಯೇ ಆಗ ಆಪ್ತ ಬಂಧುವಾಗಿದ್ದು ತಾಯಿಯ ಮಮತೆ ತೋರುತ್ತ ತನ್ನ ಹೊಟ್ಟೆ ಎಂಬ ಚಿನ್ನದ ತೊಟ್ಟಿಲಲ್ಲಿ ಎಲ್ಲ ಜೀವರನ್ನಿಟ್ಟು ನಿದ್ರೆ ಬರಿಸುತ್ತಾನೆ. ಎಚ್ಚರದಿಂದಿದ್ದು ಅವರನ್ನು ರಕ್ಷಿಸುತ್ತಾನೆ.

## ಹಿಂದಿನ ಜನ್ಮದಲಿ ಬಳಿಸಂದು ಮುಂದಣ ಜನ್ಮಕಧಿಪತಿಯಾಗಿ ಇರುತಿರಲು

ಈ ಬ್ರಹ್ಮಾಂಡದ ಸೃಷ್ಟಿಗೆ ಮೊದಲೂ ಆ ಮೇಲೂ ಹೇಗೆ ಹರಿಯೇ ಎಲ್ಲ ಜೀವರಿಗೆ ಬಂಧುವೋ ಹಾಗೆಯೇ ಹಿಂದಿನ ಬ್ರಹ್ಮಾಂಡದ ಸೃಷ್ಟಿಗೆ ಮೊದಲೂ ಆ ಮೇಲೂ ಅವನೇ ಬಂಧು ಮುಂದಿನ ಬ್ರಹ್ಮಾಂಡ ಸೃಷ್ಟಿಗೆ ಮೊದಲೂ ಆ ಮೇಲೂ ಅವನೇ ಬಂಧು.

## ಎಂದಿಗೂ ಎನಗಿಲ್ಲ ತನು ಸಂಬಂಧ ನಿನ್ನದು

ಆದರೆ ಪ್ರಳಯ ಕಾಲದಲ್ಲಿಯೂ ನೀನು ನಮ್ಮನ್ನು ಮಾತೆಯಂತೆ ವಾತ್ಸಲ್ಯದಿಂದ ಕಾಪಾಡುತ್ತಿದ್ದರೂ ನಮಗೆ ಒಂದೂ ತಿಳಿಯದು. ತಾಯಿಮಕ್ಕಳ ಈ ಸಂಬಂಧ ಎಂದಿಗೂ ನಮ್ಮ ಪಾಲಿಗೆ ಇದ್ದೂ ಇಲ್ಲದಂತೆ. ಇಂಥ ಮುಗ್ಧಶಿಶುಗಳಾದ ನಮಗೆ ನೀನೇ ಗತಿ ಎಂದು ಬಿನ್ನೈಸಿದೆನು. ನಮ್ಮನ್ನು ನೀನೇ ಸದಾ ಕಾಪಾಡಬೇಕು. ★

ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ

# ಅಮೃತದಿಂದ ದಾಸ್ಯ ವಿಮೋಚನ

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ದಕ್ಷನ ಮಕ್ಕಳಾದ ಕದ್ರು ವಿನತೆಯರು ಕಶ್ಯಪರ ಪತ್ನಿಯರಾದರು. ಸಂತಾನವನ್ನು ಕಶ್ಯಪರಲ್ಲಿ ಪ್ರಾರ್ಥಿಸಿದರು. ಕದ್ರು ಪರಾಕ್ರಮಿಗಳಾದ ಸಾವಿರ ನಾಗಗಳನ್ನು ಮಕ್ಕಳನ್ನಾಗಿ ಪಡೆದಳು. ವಿನತೆ ಬಲಾಧಿಕರಾದ ಎರಡು ಮಕ್ಕಳನ್ನು ಪಡೆದಳು. ಸವತಿಯಾದ ಕದ್ರುವಿಗೆ ಸಾವಿರ ಮೊಟ್ಟೆಗಳು ಹುಟ್ಟಿ ಇನ್ನೂರು ವರ್ಷದ ಬಳಿಕ ಅವುಗಳನ್ನು ಒಡೆದುಕೊಂಡು ಸಾವಿರ ನಾಗಗಳು ಹೊರಬಂದವು. ಆದರೆ ವಿನತೆಯ ಎರಡು ಮೊಟ್ಟೆಗಳು ಮರಿಯಾಗಲೇ ಇಲ್ಲ. ಸಹನೆ ಕಳೆದು ವಿನತೆ ಒಂದು ಮೊಟ್ಟೆಯನ್ನು ಬಲವಂತವಾಗಿ ಒಡೆದಳು. ಅರ್ಧಮಾತ್ರ ಬೆಳೆದಿದ್ದ ಮಗ ಹೊರಗೆ ಬಂದ ಅವಸರ ಮಾಡಿ ತನ್ನ ದೇಹದ ಪೂರ್ಣ ಬೆಳವಣಿಗೆಗೆ ಅಡ್ಡಿಯಾದ ಅಮ್ಮನ ಮೇಲೆ ಸಿಟ್ಟುಗೊಂಡ. ಯಾವ ಸವತಿಯ ಮೇಲಿನ ಅಸೂಯೆಯಿಂದ ನಾನಿದ್ದ ಮೊಟ್ಟೆಯನ್ನು ಮುಂಚಿತವಾಗಿ ಒಡೆದೆಯೋ ಅವಳ ದಾಸಿಯಾಗು ಎಂದು ಶಪಿಸಿದ. ತೊಡೆಯಿಲ್ಲದ ಆ ಮಗನೇ ಅರುಣ. ಇನ್ನೊಂದು ಮೊಟ್ಟೆಯನ್ನಾದರೂ ಈಗಲೇ ಒಡೆಯಬೇಡ. ಅದರಿಂದ ಹೊರಬರುವ ವೀರ್ಯಸಂಪನ್ನನಾದ ತೇಜಸ್ವಿ ಬಾಲಕನಿಂದ ನಿನ್ನ ದಾಸ್ಯಬಿಡುಗಡೆಯಾಗುವುದೆಂದನು. ಸಾವಿರ ವರ್ಷ ತುಂಬಿದ ಬಳಿಕ ಆ ಮೊಟ್ಟೆಯಿಂದ ಗರುಡ ಹೊರ ಬಂದ.

ಅಂದೊಮ್ಮೆ ಕದ್ರೂ–ವಿನತೆಯರು ಅಮೃತಮಂಥನದಿಂದ ಉದ್ಭವಿಸಿದ ಉಚ್ಚೈಃ ಶ್ರವಸ್ ಎಂಬ ಕುದುರೆಯನ್ನು ಕಂಡರು. ದೈವಪ್ರೇರಿತಳಾದ ಕದ್ರೂ ಅನಗತ್ಯ ಕುತೂಹಲದಿಂದ ವಿನತೆಯನ್ನು ಕೇಳಿದಳು. ಆ ಕುದುರೆಯ ಬಣ್ಣ ಯಾವುದು? ಅದು ಬಿಳಿಕುದುರೆ ಎಂದಳು ವಿನತೆ. ಇಲ್ಲ ಅದರ ಬಾಲ ಕಪ್ಪಿಗಿದೆ. ನನ್ನ ಮಾತು ಸರಿಯಾದರೆ ನೀನು ನನ್ನ ದಾಸಿಯಾಗಬೇಕು ಎಂದು ಪಣವಿಟ್ಟಳು. ಹಾಗೆ ಆಗಲಿ ನಾಳೆ ಬೆಳಿಗ್ಗೆ ಬಳಿಗೆ ಹೋಗಿ ನೋಡೋಣ ಎಂದಳು ವಿನತೆ. ಸುಮ್ಮನೆ ಹಟಕ್ಕೆ ಬಾಲ ಕಪ್ಪು ಎಂದ ಕದ್ರೂ ಸೋಲಿನ ಭಯದಿಂದ ತನ್ನ ಮಕ್ಕಳಾದ ಕರಿನಾಗಗಳಲ್ಲಿ ಕೇಳಿಕೊಂಡಳು. ನೀವೆಲ್ಲ ಕುದುರೆಯ ಬಾಲವನ್ನು ಒತ್ತಾಗಿ ಗುಟ್ಟಾಗಿ ಸುತ್ತಿಕೊಳ್ಳಿ. ಇಲ್ಲದಿದ್ದರೆ ವಿನತೆಯ ದಾಸಿಯಾಗಬೇಕಾಗುವುದು. ಅಮ್ಮನ ಕುಟಿಲಬುದ್ಧಿಗೆ ಆ ನಾಗಗಳು ಬಾಲಸುತ್ತಲು ಒಪ್ಪಲಿಲ್ಲ. ನೀವೆಲ್ಲ ಜನಮೇಜಯನ ಸರ್ಪಯಾಗದಲ್ಲಿ ಅಗ್ನಿಗೆ ಆಹುತಿಯಾಗಿ ನಾಶವಾಗಿರಿ ಎಂದು ಶಪಿಸಿದಳು. ಇತರ ಪ್ರಾಣಿಗಳಿಗೆ

**ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು**

ಮೃತ್ಯುಪ್ರದಗಳಾದ ಆ ಕ್ರೂರನಾಗಗಳ ಸಂಖ್ಯೆ ಹೆಚ್ಚಾಗಿದ್ದನ್ನು ಗಮನಿಸಿದ ವಿಧಾತ ಪ್ರಜಾಹಿತ ದೃಷ್ಟಿಯಿಂದ ಈ ಶಾಪವನ್ನು ಅನುಮೋದಿಸಿದ. ಕಶ್ಯಪರಿಗೆ ಈ ಸರ್ಪನಾಶದ ಬಗ್ಗೆ ಶೋಕಿಸದಿರು. ವಿಷೋಲ್ಬಣಗಳಾದ ಈ ನಾಗಗಳ ಸಂಹಾರ ಪ್ರಜಾಹಿತದ ದೃಷ್ಟಿಯಿಂದ ಒಳ್ಳೆಯದೇ ಆಗಿದೆ. ವಿಧಿವಿಲಿಖಿತವೇ ಆಗಿದೆ. ನಿನಗೆ ವಿಷಹರಮಂತ್ರ ಉಪದೇಶಿಸುತ್ತೇನೆ ಎಂದರು ಬ್ರಹ್ಮದೇವರು. ಕಶ್ಯಪರು ವಿಷಹರಮಂತ್ರವನ್ನು ಸ್ವೀಕರಿಸಿದರು.

ಇತ್ತ ಕರ್ಕೋಟಕ ನಾಗ ತನ್ನ ಸರ್ಪಗಳೊಂದಿಗೆ ಶಾಪದ ಭಯದಿಂದ ಅಮ್ಮನ ಮಾತಿನಂತೆ ಕುದುರೆಯ ಬಾಲವನ್ನು ಸುತ್ತಿಕೊಂಡ. ಮೆತ್ತಿಕೊಂಡ. ಕದ್ರೂವಿನೊಂದಿಗೆ ಬಂದ ವಿನತೆ ಕುದುರೆಯ ಬಾಲ ಕಪ್ಪಾಗಿರುವುದನ್ನು ಅಚ್ಚರಿಯಿಂದ ಕಂಡು ಕದ್ರೂವಿಗೆ ದಾಸಿಯಾದಳು.

ದಾಸಿಯಾದ ವಿನತೆಗೆ ಕಾಲಾಂತರದಲ್ಲಿ ಗರುಡನ ಉತ್ಪತ್ತಿಯಾಯಿತು. ಪ್ರಜ್ವಲಿಸುತ್ತಿದ್ದ ಗರುಡನನ್ನು ಕಂಡು ದೇವತೆಗಳು ಉಲ್ಲಸಿತರಾಗಿ ಅವನ ಅಂತರ್ಯಾಮಿಯೊಂದಿಗೆ ಅವನನ್ನು ಸ್ತುತಿಸಿದರು. ಗರುಡನು ಅವರ ಸ್ತುತಿಯಿಂದ ಪ್ರಸನನ್ನಾಗಿ ತನ್ನ ಭಯಂಕರ ತೇಜೋರಾಶಿಯನ್ನು ಉಪಸಂಹರಿಸಿ ಶಾಂತನಾದನು.

ಅತ್ತ ಸೂರ್ಯನು ರಾಹುಗ್ರಹಣದಿಂದ ವ್ಯಥೆಗೊಂಡು ಅದರಿಂದ ಕ್ರುದ್ಧನಾಗಿ ಲೋಕವನ್ನೇ ಸುಡುತ್ತಿರಲು ದೇವತೆಗಳ ಮೊರೆಯನ್ನು ಆಲಿಸಿದ ಬ್ರಹ್ಮ ಅರುಣನನ್ನು ಸೂರ್ಯನ ಸಾರಥಿಯನ್ನಾಗಿಸಿ ಸೂರ್ಯನ ತೇಜಸ್ಸನ್ನು ಕಡಿಮೆ ಮಾಡುವಂತೆ ವರವಿತ್ತು ಲೋಕಹಿತವನ್ನುಂಟು ಮಾಡಿದನು.

ಒಂದು ದಿನ ಕದ್ರು ತನ್ನ ಮಕ್ಕಳಾದ ನಾಗಗಳ ನಿವಾಸದೆಡೆಗೆ ಹೋಗಲು ಬಯಸಿ ವಿನತೆಯನ್ನು ಕರೆದು ತನ್ನನ್ನು ಎತ್ತಿಕೊಂಡು ಹೋಗುವಂತೆ ಆಜ್ಞೆಮಾಡಿದಳು. ವಿನತೆ ಕದ್ರುವನ್ನೂ, ವಿನತಾನಂದನ ಗರುಡನು ಅವಳ ಪುತ್ರನಾಗಗಳನ್ನು ಹೊತ್ತುಕೊಂಡು ಹೋದರು. ಅಮ್ಮನ ದಾಸ್ಯ ಕಂಡು ಖಿನ್ನನಾದ ಗರುಡನು ಅದರ ಕಾರಣವನ್ನು ಅಮ್ಮನಿಂದ ಕೇಳಿ ತಿಳಿದನು. ಏನಾದರು ಮಾಡಿ ಅಮ್ಮನನ್ನು ದಾಸ್ಯದಿಂದ ಬಿಡುಗೊಡೆಗೊಳಿಸಬೇಕೆಂದು ಬಯಸಿದ ಗರುಡ ನಾಗಗಳಲ್ಲಿ ನಮ್ಮಮ್ಮನ ದಾಸ್ಯವಿಮೋಚನೆಗೆ ನಾನೇನು ಮಾಡಲಿ ಎಂದು ಕೇಳಿದನು. ಅಮೃತವನ್ನು ತಂದುಕೊಟ್ಟರೆ ದಾಸ್ಯದಿಂದ ಮುಕ್ತಿ ಎಂದರು ನಾಗಗಳು. ಹಾಗೇ ಆಗಲೆಂದು ಗರುಡನು ಸಾಹಸ ತೋರಿ ಇಂದ್ರ ಲೋಕಕ್ಕೆ ತೆರಳಿ ಅಮೃತ ತಂದನು. ತಂದ ಅಮೃತವನ್ನು ದರ್ಭೆಗಳ ಮೇಲಿರಿಸಿದ ಗರುಡನು ನಾಗಗಳಿಗೆ ಸ್ನಾನ ಮಾಡಿ ಬಂದು ಅಮೃತಪಾನ ಮಾಡಿರೆಂದ. ಅವರು ಸ್ನಾನಕ್ಕೆ ತೆರಳಿದರು. ಅಷ್ಟರಲ್ಲಿ ವಿಷೋಲ್ಬಣರಾದ

ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.

ಸರ್ಪಗಳಿಗೆ ಅಮೃತಪಾನ ಒಳಿತಲ್ಲವೆಂದು ಬಗೆದ ಇಂದ್ರನು, ಗರುಡನು ದರ್ಭೆಗಳ ಮೇಲಿರಿಸಿದ್ದ ಅಮೃತವನ್ನು ಎತ್ತಿಕೊಂಡು ಹೋದನು.

ಅಮೃತ ತಂದಿತ್ತ ಕಾರಣ ಗರುಡನ ತಾಯಿ ದಾಸ್ಯ ಮುಕ್ತಳಾದಳು. ಸ್ನಾನ ಮಾಡಿ ಬಂದ ಸರ್ಪಗಳು ಅಮೃತ ದೊರೆಯದೆ ಅಮೃತ ಕಲಶವಿರಿಸಿದ ದರ್ಭೆಗಳನ್ನೇ ನೆಕ್ಕಿ ಎರಡು ನಾಲಿಗೆಗಳನ್ನು ಹೊಂದಿದವು.

ಅಮ್ಮನ ದಾಸ್ಯಮುಕ್ತಿಯಿಂದ ಗರುಡನು ಸಂತಸಪಟ್ಟು ಧನ್ಯನಾದ.

ಸವತಿಯಲ್ಲಿ ಅಸೂಯೆಯಿಂದ ವಿನತೆ ಸಹನೆಕಳೆದುಕೊಂಡು ಅಕಾಲದಲ್ಲಿ ಮೊಟ್ಟೆಯೊಡೆದು ಮಗನ ಬೆಳಗವಣಿಗೆಗೆ ಅಡ್ಡಿಯಾಗಿ ಅವನ ಶಾಪದಿಂದ ದಾಸ್ಯವನ್ನು ಅನುಭವಿಸಬೇಕಾಯಿತು. ಮತ್ತೊಬ್ಬರೆ ಮೇಲೆ ಅಸೂಯೆಪಟ್ಟು ಸಹನೆ ಕಳೆದುಕೊಂಡು ತಮ್ಮ ಸಾಧನೆಯ ಫಲವನ್ನು ಕೂಡಲೆ ಪಡೆಯಬೇಕೆಂದು ಅವಸರಪಡಬಾರದು. ಅದರಿಂದ ಫಲ ಅಪೂರ್ಣವಾಗುವುದು. ಅವಧಿಗೆ ಮುಂಚೆ ಠೇವಣಿಗಳನ್ನು ನಗದಾಗಿ ಪಡೆದು ಬಡ್ಡಿಯ ಲಾಭವನ್ನು ಕಳೆದುಕೊಂಡಂತೆ! ತಾಳ್ಮೆಯಿಂದ ಇದ್ದರೆ ಸಾಧನೆಯ ಪೂರ್ಣಫಲ ಪಡೆಯಬಹುದು.

ಹೆಂಗಸರು  ಹಟ, ಕುಟಿಲತೆಗಳಿಂದ ಜೊತೆಗಾರರನ್ನು ತಮ್ಮ ದಾಸರನ್ನಾಗಿ ಮಾಡಿಕೊಳ್ಳುವ ಸಣ್ಣತನಗಳನ್ನು ಬಿಡಬೇಕು. ಕದ್ರೂವಿನ ಮಕ್ಕಳಿಗೆ ಗರುಡ ಅಮೃತ ತಂದುಕೊಟ್ಟರೂ ಅವರಿಗೆ ಅದು ದಕ್ಕಲಿಲ್ಲ. ಸಣ್ಣ ಬುದ್ಧಿಯವರಿಗೆ ಯಾವ ಭಾಗ್ಯವೂ ದಕ್ಕುವುದಿಲ್ಲ.

ತನ್ನ ಮಾತನ್ನೊಪ್ಪದ ಸರ್ಪಗಳಿಗೆ ಸರ್ಪಸತ್ರದಲ್ಲಿ ಬೂದಿಯಾಗುವಂತೆ ಕದ್ರೂ ಶಾಪ ಕೊಟ್ಟರೆ ಲೋಕಪೀಡರರಾದ ಸರ್ಪಗಳಿಗೆ ಮಾರಣಾಂತಿಕ ದಂಡ ಸರಿಯೇ ಆಗಿದೆಯೆಂದು ಬ್ರಹ್ಮ ಅನುಮೋದಿಸಿದ. ಯಾರೇ ಆಗಲಿ ಸಮಾಜಕಂಟಕರಾಗಿ ಬೆಳೆದರೆ ದೈವ ಅವರಿಗೆ ಮಾರಣಾಂತಿಕ ಶಿಕ್ಷೆಯನ್ನೇ ಕೊಡುತ್ತದೆ ಎಂಬುದನ್ನು ಎಲ್ಲರೂ ತಿಳಿಯಬೇಕು.

ಗರುಡ ಲೋಕಭಯಂಕರನಾದರೆ ಸುರರು ಸ್ತುತಿಸಿ ಶಾಂತಗೊಳೊಸಿದರು. ವ್ಯಥೆಯಿಂದ ಸೂರ್ಯ ಲೋಕತಾಪಕನಾದರೆ ಬ್ರಹ್ಮ ಅರುಣನನ್ನು ಮುಂದೆ ಕೂಡಿಸಿ ಅವನ ತಾಪವನ್ನು ನಿಯಂತ್ರಿಸಿದರು. ಸಜ್ಜನರೇ ಆದರೂ ಅತ್ಯುತ್ಸಾಹ ಅಥವಾ ಅತಿವ್ಯಥೆಗಳಿಂದ ಸಮಾಜಕ್ಕೆ ಭಯಂಕರವಾದರೆ, ಸಂತಾಪಕರಾದರೆ ಅವರ ತೇಜಸ್ಸಿನ ಉಪಸಂಹಾರಕ್ಕೆ ದೈವ ವ್ಯವಸ್ಥೆ ಮಾಡುತ್ತದೆ. ಆದ್ದರಿಂದ ಯಾವಾಗಲೂ ಶಾಂತಚಿತ್ತರಾಗಿರುವುದನ್ನು ಕಲಿಯಬೇಕು.

(26ನೇ ಪುಟಕ್ಕೆ)

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.

ಅವಲೋಕನ

# ಮಹಾವಿಷ್ಣುವಿನ ಸನ್ನಿಧಾನಾತಿಶಯಕ್ಕೆ ಪ್ರಯೋಜಕವಾಗಿ ನಡೆದ ಏಕವಾಟದ 'ಸನ್ಮಠ'ದ ವಾರ್ಷಿಕ ಜಾತ್ರಾಮಹೋತ್ಸವ

ಸಂಗ್ರಹ–ಸಗ್ರಿ ರಾಘವೇಂದ್ರ ಉಪಾಧ್ಯಾಯ

ಶ್ರೀ ಶ್ರೀ ವಿದ್ಯಾಧೀಶತೀರ್ಥರಿಂದ 7–5–2008, ಅಕ್ಷಯತೃತೀಯಾದಂದು ಮರುಪ್ರತಿಷ್ಠಾಪನೆಗೊಳಗಾದ ಏಕವಾಟದ ಮಹಾವಿಷ್ಣುವಿನ 'ಸನ್ಮಠ' (ದೇವಾಲಯ) ದಲ್ಲಿ ಕಳೆದ 10–11–2008ರಿಂದ 12–11–2008ರವರೆಗೆ ವಾರ್ಷಿಕ ಜಾತ್ರಾಮಹೋತ್ಸವವು ವೈಭವದ ಜೊತೆಗೆ ಮಹಾವಿಷ್ಣುವಿನ ಸನ್ನಿಧಾನಾತಿಶಯಕ್ಕೆ ಪ್ರಯೋಜಕವಾಗುವಂತೆ ನಡೆಯಿತು.

## ಧಾರ್ಮಿಕ ಕಾರ್ಯಕ್ರಮಗಳು

ಶ್ರೀಶಿಬರೂರು ಹಯಗ್ರೀವತಂತ್ರಿಗಳ ಹಾಗೂ ಶ್ರೀವೇದವ್ಯಾಸತಂತ್ರಿಗಳ ಮುಂದಾಳುತ್ವದಲ್ಲಿ ತೋರಣ ಮುಹೂರ್ತದಿಂದ ಪ್ರಾರಂಭಿಸಿ ದೃಢ ಸಂಪ್ರೋಕ್ಷಣಕಲಶದವರೆಗೆ ಜಾತ್ರಾಮಹೋತ್ಸವಕ್ಕೆ ಸಂಬಂಧಿಸಿದಂತೆ ನಡೆಯಬೇಕಾದ ಹೋಮಹವನಗಳು ವಿಧ್ಯುಕ್ತವಾಗಿ ನಡೆದವು. ಬೆಂಗಳೂರಿನ ಡಾ। ಪ್ರಭಂಜನಾಚಾರ್ಯರ ನೇತೃತ್ವದ ಸುಮಾರು 80 ಅಧ್ಯಾತ್ಮ ಸಾಧಕರ ವತಿಯಿಂದ 12–11–2008ರಂದು ಧಾತ್ರೀಹೋಮ, ನಂದಳಿಕೆ ವಿಠಲಭಟ್ಟರ ಪೌರೋಹಿತ್ಯದಲ್ಲಿ ನಡೆಯಿತು. ಪಲಿಮಾರಿನ ಯೋಗದೀಪಿಕಾದ 50ಕ್ಕಿಂತಲೂ ಅಧಿಕ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ಮಹಾವಿಷ್ಣುವಿಗೆ ವಿಷ್ಣುಸಹಸ್ರನಾಮಾವಲಿಯ ಪಠನಪೂರ್ವಕ ಲಕ್ಷ ತುಳಸಿ–ಪುಷ್ಪಗಳ ಅರ್ಚನೆ ನಡೆಯಿತು.

## ಆಧ್ಯಾತ್ಮಿಕ ಕಾರ್ಯಕ್ರಮಗಳು

ಆಧ್ಯಾತ್ಮಿಕ ಕಾರ್ಯಕ್ರಮದ ರೂಪದಲ್ಲಿ ಶ್ರೀಪಾದರ, ವಿದ್ವಾಂಸರ ಪ್ರವಚನಗಳು ನಡೆದುವು. ಶ್ರೀವಿದ್ಯಾಧೀಶತೀರ್ಥರು ಮೂರುದಿನಗಳಲ್ಲೂ ಕಾರ್ತಿಕಮಾಸದಲ್ಲಿ ದೀಪದ ವೈಶಿಷ್ಟ್ಯ, ಮಧ್ವಗುರುಗಳ ಸಂದೇಶ ಇತ್ಯಾದಿಗಳ ಬಗ್ಗೆ ಪ್ರವಚನಗಳನ್ನು ನೀಡಿ ಅನುಗ್ರಹಿಸಿದರು.

ಡಾ। ಪ್ರಭಂಜನಾಚಾರ್ಯರು 12–11–2008ರಂದು ಮಧ್ಯಾಹ್ನಧಾತ್ರೀಹೋಮದ ಉಪಸಂಹಾರದ ಅವಧಿಯಲ್ಲೂ ಅಂದು ಸಂಜೆ ಸಭಾಕಾರ್ಯಕ್ರಮದಲ್ಲೂ ಧಾತ್ರೀಹೋಮದ ಬಗ್ಗೆ, ಏಕವಾಟಕ್ಕೂ ಶ್ರೀಮಧ್ವಗುರುಗಳಿಗೂ ಇರುವ ನಂಟಿನ ಬಗ್ಗೆ ಶ್ರೀಮಧ್ವರ ಮೂಲಕ ನಡೆದ ಸಾತ್ವಿಕ ಪವಾಡಗಳ ಬಗ್ಗೆ, ಅವರ ತತ್ವಜ್ಞಾನದ ವೈಶಿಷ್ಟ್ಯದ ಬಗ್ಗೆ, ಪ್ರವಚನವನ್ನು ನೀಡಿದರು.

ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.

11–11–2008ರಂದು ಸಂಜೆ ನಡೆದ ಸಭಾಕಾರ್ಯಕ್ರಮದಲ್ಲಿ ಸಗ್ರಿ ರಾಘವೇಂದ್ರ ಉಪಾಧ್ಯಾಯರು ವಿಷ್ಣುವಿನ ಅಂತರ್ಯಾಮಿತ್ವವನ್ನು ಉಪಪಾದಿಸಿದರಲ್ಲದೆ, ಉತ್ಸವದ ಸಂದರ್ಭದಲ್ಲಿ ಮಹಾವಿಷ್ಣುವಿನ ಪ್ರತಿಮಾ ಮಾಧ್ಯಮದಲ್ಲಿ ಅವನ ಮಂದಹಾಸದ ಹಾಗೂ ಚಕ್ರಾದಿಗಳ ಧಾರಣೆಯ ಅನುಸಂಧಾನವನ್ನು ಹೇಗೆ ತಂದುಕೊಳ್ಳಬೇಕೆಂದು ವಿವರಿಸಿದರು.

ಪಂಜ ಭಾಸ್ಕರಭಟ್ಟರು, ತಮ್ಮ ಪ್ರವಚನದಲ್ಲಿ ಏಕವಾಟದ ಆಸುಪಾಸಿನ ದೇವಾಲಯಗಳಲ್ಲಿಯ ದೈವಾಲಯಗಳಲ್ಲಿಯ ವ್ಯವಹಾರಗಳನ್ನು ಪರಿಶೀಲಿಸಿದಲ್ಲಿ ಮಧ್ವಗುರುಗಳ ಪ್ರಭಾವ ಈ ಗ್ರಾಮದ ಭಕ್ತರ ಮೇಲೆ ಎಷ್ಟೊಂದು ಗಾಢವಾಗಿತ್ತೆಂದು ಸ್ಪಷ್ಟವಾಗಬಲ್ಲದೆಂದು ಪ್ರಸ್ತಾಪಿಸಿ, ವರ್ಕಾಡಿಯ ಸುಬ್ರಹ್ಮಣ್ಯದೇವಾಲಯಕ್ಕೆ ಸಂಬಂಧಪಡುವ ಮಡಿಕತ್ತಾಯ ದೈವದ ಪಂಬದ (ದರ್ಶನ ಬರುವ ವ್ಯಕ್ತಿ) ಕೋಲಾದಿಗಳ ಪ್ರಸಂಗದಲ್ಲಿ ಹೇಳುವ ತುಳುಭಾಷೆಯ ಮಾತನ್ನು ಹೀಗೆ ಉಲ್ಲೇಖಿಸಿದರು.

**'ಗುರುಮದ್ರಾಯರೆ ಮಲ್ತಿ ಕಟ್ಲೆ ಪ್ರಕಾರ ದೀ ಈ ಹೋಮನ್**

**ಸ್ವಾಮಿ ನಾರಾಯಣಗ್ ಅರ್ಪಿತ ಮಲ್ಪಾವೊಂದ್ ಮದ್ರಾಯಗುರು ಮಲ್ತಿ**

**ಕಟ್ಲೆ ಸಾಂಗ ಮಲ್ಪಾವುಂಡ್.....'** (ಗುರುಮಧ್ವರಾಯರು ಹಾಕಿಕೊಟ್ಟ ಕಟ್ಟಳೆಯ ಪ್ರಕಾರ ಈ ಪೂಜೆಯನ್ನು ನೈವೇದ್ಯವನ್ನು ಸ್ವಾಮಿನಾರಾಯಣನಿಗೆ ಸಮರ್ಪಿಸಿ ಆ ಮೂಲಕ ಮಧ್ವಗುರುಗಳ ಕಟ್ಟಳೆಯನ್ನು ಪೂರ್ಣಗೊಳಿಸಿದಂತಾಗಿದೆ...)

ಹೀಗೆ ಘೋಷಿಸುವ 'ಪಂಬದ'ಗೆ ಆ ಮಾತಿನ ಅರ್ಥವಾಗಲೀ, ಅದರಲ್ಲಿ ಉಲ್ಲೇಖಗೊಂಡ 'ಗುರುಮದ್ರಾಯ'–ಎಂದರೆ ಯಾರು? ಅವರು ಹಾಕಿಕೊಟ್ಟ ಕಟ್–ಕಟ್ಟಳೆ, ನಿಯಮ ಯಾವುದು? ಅದಕ್ಕೆ ಅನುಗುಣವಾಗಿ ಪೂಜೆಯನ್ನು ಪ್ರಸಾದವನ್ನು ಅರ್ಪಿಸುವ ಸ್ವಾಮಿನಾರಾಯಣ ಎಂದರೆ ಯಾರು? ಇವೆಲ್ಲ ಗೊತ್ತಿದೆಯೋ ಇಲ್ಲವೋ? ಅಂತೂ ಬಾಯಿಯಿಂದ ಬಾಯಿಗೆ ಪರಂಪರಾಗತವಾಗಿ ಬಂದದ್ದನ್ನು ಆ ವ್ಯಕ್ತಿ ಹಾಗೆ ಉದ್ಗರಿಸುವನೆಂದರೆ ಹಾಗೆ ಪರಂಪರಾಗತವಾಗಿ ಬರಬೇಕೆಂದರೆ ಹಿಂದಿನಿಂದಲೂ ಆ ಪ್ರದೇಶದ ಜನರ ಮೇಲೆ ಮಧ್ವಗುರುಗಳ ಪ್ರಭಾವ ಗಾಢವಾಗಿತ್ತೆಂದು ತಿಳಿದು ಬರುವುದು. ಗುರುಮದ್ರಾಯ ಎಂದರೆ ಗುರುಗಳಾದ ಮಧ್ವರಾಯರು. ಅವರು ಹಾಕಿದ ಕಟ್–ಕಟ್ಟಳೆ ಎಂದರೆ ಪ್ರಾಯಶಃ ಮೊದಲು ಮಾಂಸಾಹಾರಿಯಾಗಿದ್ದ ಆ ದೈವ ಸಸ್ಯಾಹಾರಿಯಾಗುವಂತೆ ಮಧ್ವಗುರುಗಳು ಕಟ್ಟಳೆ ಮಾಡಿದ್ದಿರಬಹುದು. ಯಜ್ಞಯಾಗಾದಿಗಳಲ್ಲಿಯ ಪಶುಬಲಿಯನ್ನು ನಿಲ್ಲಿಸಿ ಪಿಷ್ಟಪಶುಬಲಿಯ ಕಟ್ಟಳೆಯನ್ನು ಹೇಗೆ ಮಾಡಿದ್ದರೋ ಹಾಗೆ. ಅಂತೆಯೇ

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

ಸಸ್ಯಾಹಾರವನ್ನು ಸ್ವೀಕರಿಸುವಾಗಲೂ ಮೊದಲು ಸ್ವಾಮಿನಾರಾಯಣನಿಗೆ–ಭಗವಂತನಿಗೆ ಅರ್ಪಿಸಿ,ಅವನ ಪ್ರಸಾದವಾಗಿಯಷ್ಟೇ ಸ್ವೀಕರಿಸಬೇಕೆಂದೂ ಮಧ್ವಗುರುಗಳು ಆ ದೈವಕ್ಕೆ ಕಟ್ಟಳೆ ಮಾಡಿದ್ದಿರಬಹುದು. ಆದುದರಿಂದಲೇ ಅಂತಹ ಕಟ್ಟಳೆಗೆ ಅನುಗುಣವಾಗಿ ಸ್ವಾಮಿನಾರಾಯಣಗೆ ಸಮರ್ಪಿಸಿ ತನ್ನ ಆಹಾರವನ್ನು ಆ ದೈವ ಸ್ವೀಕರಿಸುವುದು. ಇದರಿಂದ ಆ ಪ್ರದೇಶದ ಜನರ ಪೂಜೆ ಪುರಸ್ಕಾರಗಳ ವಿಷಯದಲ್ಲಿ ಮಧ್ವಗುರುಗಳು ಎಷ್ಟು ಪ್ರಭಾವ ಬೀರಿದ್ದರೆಂದು ತಿಳಿದು ಬರುವುದರ ಜೊತೆಗೆ ಶ್ರೀಮಧ್ವರು ದೈವ, ಭೂತಾದಿಗಳ ಪೂಜೆ ಪುರಸ್ಕಾರಾದಿಗಳಿಗೆ ಭಗವಂತನ ಸಂಬಂಧವನ್ನು ಹಚ್ಚಿ ಹೇಗೆ ಕ್ರಮೇಣ ಸಾತ್ವಿಕ ರೂಪತಾಳುವಂತೆ ಆಧ್ಯಾತ್ಮಿಕಕ್ರಾಂತಿ ನಡೆಸುತ್ತಿದ್ದರೆಂಬುದೂ ಸೂಚಿತವಾಗುವುದು.

ವರ್ಕಾಡಿಯ ಸುಬ್ರಹ್ಮಣ್ಯ ದೇವಾಲಯದ ಅರ್ಚಕರು ಮಾಧ್ವರಲ್ಲದಿದ್ದರೂ ಮಧ್ವನವಮಿಯಂದು ವಿಶೇಷಪೂಜೆಪುರಸ್ಕಾರವನ್ನು ನಡೆಸುವರೆಂಬುದನ್ನೂ ಉಲ್ಲೇಖಿಸಿದ ಭಾಸ್ಕರಭಟ್ಟರು ಜನಸಾಮಾನ್ಯರಲ್ಲಿ ಮಧ್ವರ ಪ್ರಭಾವ ಇಷ್ಟೊಂದು ದಟ್ಟವಾಗಿ ಇದೆ ಎಂದರೆ ಶ್ರೀಮಧ್ವರು ಈ ಪ್ರದೇಶದಲ್ಲಿ ಒಂದೆರಡು ದಿನಗಳಷ್ಟೇ ಅಲ್ಲದೆ ತಿಂಗಳುಗಟ್ಟಲೆ ಇಲ್ಲಿಯ ಜನರಿಗೆ ಪಾಠಪ್ರವಚನಾದಿಗಳನ್ನೂ ನಡೆಸುತ್ತಿದ್ದರೆಂದು ದೃಢವಾಗಬಲ್ಲದೆಂದು ಸ್ಪಷ್ಟಪಡಿಸಿದರು.

## ಸಾಂಸ್ಕೃತಿಕ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳಾಗಿ ಆಸುಪಾಸಿನ ಸಂಘಸಂಸ್ಥೆಗಳಿಂದ ಯಕ್ಷಗಾನ, ನೃತ್ಯವೈವಿಧ್ಯ, ತುಳುನಾಟಕ ಇವುಗಳ ಜೊತೆಗೆ ಉಡುಪಿ ಪಲಿಮಾರುಮಠದಲ್ಲಿ ನಡೆಯುತ್ತಿರುವ ತತ್ವದೀಪಿಕಾ ಗುರುಕುಲದ ಯುವವಿದ್ವಾಂಸರಿಂದ 'ಕೃಷ್ಣಲೀಲೆ–ಕಂಸವಧೆ'ಯಕ್ಷಗಾನ ಮಹಾವಿಷ್ಣುವಿನ ಪ್ರೀತ್ಯರ್ಥವಾಗಿ ಅಭಿನಯಿಸಲ್ಪಟ್ಟಿತು.

**ಸರೋವರನಿರ್ಮಾಣಕ್ಕೆ ಸಂಕಲ್ಪ–** ಸನ್ಮಠದ ಈಶಾನ್ಯದಿಕ್ಕಿನಲ್ಲಿ ಹಿಂದೆ ಇದ್ದ ಸರೋವರ ಕ್ರಮೇಣ ಮುಚ್ಚಿ ಹೋಗಿದ್ದು ಅದನ್ನು ಪುನಃ ನಿರ್ಮಿಸಬೇಕೆಂದು ಮಹೋತ್ಸವದ ಪ್ರಸನ್ನ ಅವಧಿಯಲ್ಲಿ ಮಹಾವಿಷ್ಣುವಿನ ಸನ್ನಿಧಿಯಲ್ಲಿ ಸಂಕಲ್ಪಿಸಲಾಯಿತು.

**ಸನ್ನಿಧಾನಾತಿಶಯಕ್ಕೆ ಪುಷ್ಟಿ–** ಹೀಗೆ ಏಕವಾಟದ ಮಹಾವಿಷ್ಣುವಿನ ವಾರ್ಷಿಕ ಜಾತ್ರಾಮಹೊತ್ಸವ ಸುಮಾರು ಸಾವಿರಕ್ಕಿಂತಲೂ ಅಧಿಕಭಕ್ತರ ಸಮಾವೇಶದಲ್ಲಿ ಭಕ್ತರಿಗೆ ಅಧಿಕಸ್ಫೂರ್ತಿ, ಉತ್ಸಾಹ ಉಂಟಾಗುವಂತೆ ನಡೆಯಿತಲ್ಲದೆ, ಲಕ್ಷತುಲಸಿಪುಷ್ಪಾರ್ಚನೆ, ಧಾತ್ರೀಹೋಮ ಮುಂತಾದ ವಿಶಿಷ್ಟಧಾರ್ಮಿಕಕಾರ್ಯಕ್ರಮಗಳಿಂದಾಗಿ ಮಹಾವಿಷ್ಣುವಿನ ಸನ್ನಿಧಾನಾತಿಶಯಕ್ಕೆ ಪುಷ್ಟಿ ದೊರಕುವಂತೆ ನಡೆಯಿತು.

(34ನೇ ಪುಟಕ್ಕೆ)

**ಗೋವುಗಳನ್ನು–ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.**

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ಹಣದಿಂದ ಮಾನವನಿಗೆ ತೃಪ್ತಿಯಿಲ್ಲ. ಇದು ನಮ್ಮೆಲ್ಲರ ಅನುಭವಕ್ಕೆ ಬಂದಿರುವ ನಿತ್ಯ ಸತ್ಯ. ಎಷ್ಟು ಸಂಪಾದಿಸಿದರೂ ತೃಪ್ತಿ ಇಲ್ಲ. ಹಣ ನೀಡಿದಷ್ಟೂ ದಾಹ ಹೆಚ್ಚುತ್ತದೆಯೇ ವಿನಃ ಸಂತೋಷ ಸಿಗದು. ಇಂದು pay commission-allowance salaryಗಳು ಹತ್ತಾರು ಮುಖ ಆದರೂ ದುಡಿಯುವವನ ಮುಖ ದುರ್ಮುಖ. ಹೀಗಾಗಿ ಹಣದಿಂದ ಸಂತೋಷ ಸಿಗದು. ತೃಪ್ತಿಯಿಂದಲೇ ಸಂತೋಷ ಎಂದಿದ್ದಾನೆ ನಚಿಕೇತ. ಇದನ್ನು ಒಪ್ಪದವರು ಯಾರೂ ಇಲ್ಲ. ಒಪ್ಪಿ ನಡೆಯುವವರೂ ಒಬ್ಬರೂ ಇಲ್ಲ. ಈ ಸಂದರ್ಭದಲ್ಲಿ ಭರ್ತೃ ಹರಿಯ ಒಂದು ಮಾತು ಸ್ಮರಣೀಯ

**ಸರ್ಪಾಃ ಪಿಬಂತಿ ಪವನಂ ನ ಚ ದುರ್ಬಲಾಸ್ತೇ ।**
**ಶುಷ್ಕ ತೃಣೈರ್ವನಗಜಾ ಬಲಿನೋ ಭವಂತಿ ॥**
**ಕಂದೈಃ ಫಲೈಃ ಮುನಿವರಾ ಕ್ಷಪಯಂತಿ ಕಾಲಮ್ ।**
**ಸಂತೋಷ ಏವ ಪುರುಷಸ್ಯ ಪರಂ ನಿದಾನಮ್ ॥**

ಹಾವುಗಳು ಕುಡಿಯುವುದು ಗಾಳಿಯನ್ನೇ. ಹಾಗೆಂದು ಅವನ್ನು ಯಾರೂ ಹಗುರವಾಗಿ ಕಾಣುವುದಿಲ್ಲ. ಉಫ್ ಎಂದು ಧಿಕ್ಕರಿಸುವುದೂ ಇಲ್ಲ. ಅವುಗಳ ಸರಸರನೆ ಹರಿವ ಶಕ್ತಿ ಆಕ್ರಮಿಸುವ ಶಕ್ತಿ ಇವು ಯಾವುದಕ್ಕೂ ಕಮ್ಮಿ ಇಲ್ಲ. ಆನೆಗಳು ತಿನ್ನುವುದು ಹುಲ್ಲು–ಕಡ್ಡಿಗಳನ್ನೇ ಹಾಗೆಂದು ಆನೆಗಳನ್ನು ಯಾರು ಅಸಡ್ಡೆ ಮಾಡುವುದಿಲ್ಲ. ಅವುಗಳ ಶಕ್ತಿ ಅಂದಾಜಿಗೆ ಸಿಗದಷ್ಟೇ ಸರಿ. ಇನ್ನು ಮುನಿಗಳು ತಿನ್ನುವುದು ಒಣಗಿದ ಫಲ–ಬೇರುಗಳನ್ನು, ಗೆಡ್ಡೆಗೆಣಸುಗಳನ್ನು. ಹಾಗೆಂದು ಯಾರೂ ಮುನಿಗಳ ಮೇಲೆ ಸವಾರಿ ಮಾಡಲಾರರು. ಅವರು ಬಾಯಿಬಿಟ್ಟರೆ ವರ–ಬಿಗಡಾಯಿಸಿದರೆ ಶಾಪ. ಶಕ್ತಿಗೆ ತಿನ್ನುವ ಆಹಾರ, ಇರುವ ಪರಿಸರ ಏನೂ ಮಾಡುವುದಿಲ್ಲ. ತೃಪ್ತಿಯೊಂದೇ ಮಾನವನ ನಿಜವಾದ ಶಕ್ತಿಗೆ ಕಾರಣ.

ಇಂದು ಆ ಶಕ್ತಿಯಿಲ್ಲದವಗೆ ಯಾರ ಧನವೂ ಶಕ್ತಿ ನೀಡದು. ಅದು ಧನಾತ್ಮಕ ಆಗದೆ ಋಣಾತ್ಮಕವೇ ಆದೀತು.

ಬಹುಸಜ್ಜನರ ಮಾರ್ಗವನ್ನಾಶ್ರಯಿಸಿ.

ಮಧ್ವರು ತಂತ್ರಶಾಸ್ತ್ರದಲ್ಲಿ ತೃಪ್ತಿಯನ್ನು ಕೋಟಿಪಟ್ಟು ಮಿಗಿಲಾದ ಗುಣ ಎಂದು ಕರೆದಿದ್ದಾರೆ.

ಹೀಗೆ ತೃಪ್ತಿಯಿದ್ದಲ್ಲಿ ಸಂತೋಷ. ಅದಿಲ್ಲದಿದ್ದಲ್ಲಿ ಹಣದಿಂದ ತೃಪ್ತಿ ಎಂದೂ ಆಗದು.

ಹಣದಿಂದ ಅಮೃತತ್ವದ ಆಸೆ ಈಡೇರದು. **'ಅಮೃತತ್ವಸ್ಯ ತು ನಾಽಶಾಸ್ತಿ ವಿತ್ತೇನ'** ಎಂಬ ಯಾಜ್ಞವಲ್ಕ್ಯರ ಮಾತು ಮನನೀಯ.

ಮಹಾತ್ಮರನ್ನು ಕಾಣುವುದೇ ಬದುಕಿನ ಪರ್ವಕಾಲ. ಇತರರು ಏನೂ ಕೊಟ್ಟರೂ ನಾಶವಾಗುವುದು. ನೀಡಿದ ಜ್ಞಾನ ಮಹತ್ತು. ಅದು ಕರಗದ ನಿಧಿ ಎಂಬ ಆತ್ಮಸಂತೋಷ ಇರಬೇಕು. ಅದು ಮಾತಿನಲ್ಲಿ ಸತ್ಯವನ್ನು ಕೃತಿಯಲ್ಲಿ ಧೈರ್ಯವನ್ನೂ ಅಡಿಗಡಿಗೆ ಅನುಭವವನ್ನೂ ನೀಡಿರುತ್ತದೆ.

**ಸತ್ಸಂಗತಿಃ ಕಥಯ ಕಿಂ ನ ಕರೋತಿ ಪುಂಸಾಂ**

–ಎಂದಿಲ್ಲವೇ ಭರ್ತೃ ಹರಿ

ನಿನ್ನನ್ನು ಕಂಡರೆ ನಿಧಿ ಸಿಕ್ಕಂತೆ. ಆ ನಿಧಿಗೆ ನಿರಂತರ ಚಿಂತೆ ನೀ ನೀಡುವ ನಿಧಿ ನಿಶ್ಚಿಂತೆ. ಯಮ ನಿನ್ನ ಕಂಡೆ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡೆ. ಇನ್ನೇನು ನನಗೆ ಬೇಕು ಎಂಬಂತಿದೆ ಈ ಮಾತು.

ಇನ್ನು ನಾವು ಬದುಕಿರುವುದು ನೀನು ಒಡೆಯನಾಗಿರುವ ತನಕ ನಾವು ಬದುಕಿ ಇರಬಲ್ಲೆವು. ಸಾಕು. ಮತ್ತಿನ್ನೇನು ಬೇಕು? ಸೇವಕನು ಅರಸನ ಆಳಾಗಿರುವ ತನಕ ಅರಮನೆಯಲ್ಲಿ ಇರಬಲ್ಲನು. ಅವನ ಸೇವೆ ಅರಮನೆ ಇರುವ ತನಕ ಏನೂ ಖಾಯಂ ಅಲ್ಲ. ಹೀಗೆ ನೀನು ನಮ್ಮ ಆಯುಸ್ಸಿಗೆ ಒಡೆಯ. ಅಷ್ಟು ಸಾಕು. ಸಾರ್ಥಕ ಮಾಡು ನಮ್ಮ ಬದುಕು.

**ಯಾವತ್ ಈಶಿಷ್ಯಸಿ ತ್ವಂ**–'ನೀನು ಒಡೆಯನಾಗಿರುವ ತನಕ' ಎಂದರೆ ನಿನ್ನ ಒಡೆತನಕ್ಕೂ ಮಿತಿ ಇದೆ. ಪ್ರಳಯದಲ್ಲಿ ನಿನ್ನ ಅಧಿಕಾರವೂ ಲಯ ಆಗುವುದು ನಿಶ್ಚಯ. ನೀನು ನೀಡುವ ಲೌಕಿಕವಾವುದೂ ಲೆಕ್ಕಕ್ಕೆ ಬಾರದು. ನೀಡಬಹುದಾದ ವರವೆಂದರೆ ಮೃತ್ಯುವಿನ ರಹಸ್ಯ ಮೀರುವ ಅಮರತ್ವ ಮಾತ್ರ. ಅದನ್ನು ನೀಡು.

(ಮುಂದುವರಿಯುವುದು)

**ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.**

ಸ್ತೋತ್ರ ಚಿಂತನೆ

ಭಾಗ–8

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

**ಮಾಯಾವಟು ವಾಮನಃ ಸ್ಥಲೇಽವ್ಯಾತ್**

**"ಸ್ಥಳದಲ್ಲಿ ವಾಮನನು ರಕ್ಷಿಸಲಿ"**

ನಮ್ಮೆಲ್ಲರಿಗೂ ಮೂಲಪುರುಷ ವೈವಸ್ವತಮನು. ಅವನಿಗೆ ಅನುಗ್ರಹಿಸಿದ ದೇವ ಮತ್ಸ್ಯ. ಹಾಗಾಗಿ ನಾವೆಲ್ಲರೂ ನಮ್ಮ ಆದಿಗನಿಗೆ ಇಷ್ಟಾರ್ಥವನ್ನು ಕರುಣಿಸಿದ ಮತ್ಸ್ಯನನ್ನು ಮೊದಲು ಸ್ಮರಿಸಬೇಕು. ಇಂಥಹ ಶ್ರೀಹರಿಯನ್ನು ಅಂತರಂಗದಲ್ಲಿಟ್ಟು ನಿತ್ಯ ಸ್ತುತಿಸಬೇಕು.

ಅಥವಾ ನೀರಿನಲ್ಲಿ ರಕ್ಷಣೆ ಪಡೆದ ಜೀವರಿಗೆ ನೆಲದಲ್ಲಿ ರಕ್ಷಿಪರು ಯಾರು? ಎಂಬ ಆಕಾಂಕ್ಷೆಗೆ ಉತ್ತರವಾಗಿ **'ಸ್ಥಲೇ ವಾಮನಃ'** ಎಂದಿದ್ದಾರೆ.

ವಾಮನನ ರೂಪ ಅತ್ಯಂತ ಅಣು. ಅಣುತ್ವ–ಮಹತ್ವಗಳನ್ನು ಪ್ರಕಟಪಡಿಸಿದ ವಾಮನ. ತ್ರಿವಿಕ್ರಮ ರೂಪಕ್ಕೆ ಸಾಟಿಯೇ ಇಲ್ಲ. ಎಷ್ಟು ಚಿಕ್ಕಸ್ಥಳದಲ್ಲಿಯೂ ವಾಮನನೆನಿದ್ದಾನೆ. ಎಷ್ಟು ದೊಡ್ಡ ಸ್ಥಳದಲ್ಲಿಯೂ (ವಾಮನ) ತ್ರಿವಿಕ್ರಮನಿದ್ದಾನೆ. ಸ್ಥಳದಲ್ಲಿಯೂ ಇದ್ದಾನೆ. ನೀರಿನಲ್ಲಿಯೂ ಇದ್ದಾನೆ. ಹದಿನಾಲ್ಕು ಲೋಕಗಳ ಒಳಗೂ ಇದ್ದಾನೆ. ಹೊರಗೂ ಇದ್ದಾನೆ. ಕೇವಲ ಇರುವುದು ಮಾತ್ರವಲ್ಲ. ರಾಜಾಧಿರಾಜನಾಗಿ ಇದ್ದಾನೆ. ಯಾರಿಗೆ ಯಾರಿಗೆ ಯಾವ ಯಾವ ಸ್ಥಳದಲ್ಲಿ ವಾಸ ಎಂದು ನಿರ್ಣಯಿಸುವವ ವಾಮನ. ಆದ್ದರಿಂದಲೇ ವಾಮನ ಪುರಾಣದ ಮಂಗಳ ಶ್ಲೋಕವೇ ಇಂತಿದೆ.

**ತ್ರೈಲೋಕ್ಯರಾಜ್ಯಮಾಚ್ಛಿದ್ಯ ಬಲೇರಿಂದ್ರಾಯ ಯೋ ದದೌ ।**
**ನಮಸ್ತಸ್ಮೈ ಸುರೇಶಾಯ ಸದಾ ವಾಮನರೂಪಿಣೇ ॥**

ದೇವೇಂದ್ರನು ಸ್ಥಾನ ಭ್ರಷ್ಟನಾದಾಗ ಉಪೇಂದ್ರವಾಮನನು ಬಲಿಯಿಂದ ರಾಜ್ಯಕಸಿದು ಪುನಃ ಪುರಂದರನಿಗೆ ದೊರಕಿಸಿಕೊಟ್ಟ. ಬಲಿಗೆ ಸುತಳ ಕೊಟ್ಟ. ಇಲ್ಲಿ ಸುತಲ ಎಂದರೆ **ಸು**= ಉತ್ಕೃಷ್ಟವಾದ **ತಲ**= ತನ್ನ ಪಾದ ತಲವನ್ನು ಮೊದಲು ಕೊಟ್ಟ. ಬಲಿಗೆ ಹರಿಯ ಪದತಲವೇ ಇಷ್ಟವಾದಾಗ ಪ್ರೀತಿಯಿಂದ ಸುತಲಲೋಕವನ್ನು ಕೊಟ್ಟ ಕೊಡುಗೈ ಧೀರ

ಗೋವುಗಳನ್ನು–ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.

ವಾಮನ. ಕೊಟ್ಟದ್ದು ಮಾತ್ರವಲ್ಲ; ಬಲಿಯ ಲೋಕದ ದ್ವಾರಪಾಲಕನಾಗಿ ನಿಂತಿದ್ದಾನೆ. ಮುಂದಿನ ಸ್ವಾರೋಚಿಷ ಮನ್ವಂತರದಲ್ಲಿ ಇವನಿಗೇ ಇಂದ್ರಾಧಿಪತ್ಯವನ್ನು ಕೊಡುವ ನಿರ್ಧಾರವನ್ನು ಮಾಡಿದ್ದಾನೆ.

**'ಹೂವ ತರುವರ ಮನೆಗೆ ಹುಲ್ಲ ತರುವ**
**ಕಾವ ಲಕುಮೀರಮಣ ಇವಗಿಲ್ಲ ಗರುವ'**

ಭಗವಂತನು ಮಾಡಿದ ಅಭಯದಾನಕ್ಕೆ ಬಲಿಯು ಇಂದಿಗೂ ಸುತಲಲೋಕದಲ್ಲಿ ಭಕ್ತಿಯಿಂದ ಆರ್ದ್ರಚಿತ್ತನಾಗಿ ಅಧಮರ್ಣತೆಯ ಕಣ್ಣಾಲಿಗಳಿಂದ ಹರಿಯನ್ನು ಪೂಜಿಸುತ್ತಿದ್ದಾನೆ. **'ಯದ್ವಾರ್ಯದ್ಯಾಪಿ ವರ್ತತೇ'** ಆದ್ದರಿಂದ ಶ್ರೀಹರಿಯು ವಟುವಾಮನನಾಗಿದ್ದರೂ ಸಾರ್ವಭೌಮನಾಗಿ ಮೆರೆಯುತ್ತಿದ್ದಾನೆ.

ಈ ವಾಮನನು ಕೇವಲ ಸ್ಥಳಕ್ಕೆ ಮಾತ್ರ ಅಭಿಮಾನಿಯಲ್ಲ; **'ಸ್ಥಲೇ ಚ'** ಎನ್ನುವ ಪದವು 'ಸ್ಥಳಕ್ಕೂ' ಎಂಬ ಸಮುಚ್ಚಯ ಅರ್ಥ ನೀಡುತ್ತದೆ. ಅರ್ಥಾತ್ ನೀರಿಗೂ ಆಶ್ರಯ, ಸ್ಥಳಕ್ಕೂ ಆಶ್ರಯ. ನೀರು ಸಹಿತವಾದ ಸ್ಥಳಕ್ಕೂ ಆಶ್ರಯ ಎಂದು. ಭಾದ್ರಪದ ಶುಕ್ಲ ಏಕಾದಶಿಯಂದು ಮಧ್ಯಾಹ್ನ ನದಿಯಲ್ಲಿ ಮಿಂದು ವಾಮನಜಯಂತೀ ಪ್ರಯುಕ್ತ ಅರ್ಘ್ಯನೀಡಿ ಪೂಜಿಸುವಾಗ ಹೇಳುವ ಮಂತ್ರದಲ್ಲಿ ನೀರಿಗೂ ಅಧಿಪತಿ ಎಂದು ಹೇಳಲಾಗಿದೆ.

**ನಮಸ್ತೇ ಪದ್ಮನಾಭಾಯ ನಮಸ್ತೇ ಜಲಶಾಯಿನೇ ।**
**ತುಭ್ಯಮರ್ಘ್ಯಂ ಪ್ರಯಚ್ಛಾಮಿ ಬಾಲವಾಮನ ರೂಪಿಣೇ ॥** ಎಂದು.

ಬ್ರಹ್ಮಚಾರಿಯಾದ ವಾಮನನು ಸ್ಥಳ ಮತ್ತು ನೀರಿನಲ್ಲಿ ಮಾತ್ರ ರಕ್ಷಕನಲ್ಲ, ವಾಮನನೆನಿಸಿದ ರುದ್ರನನ್ನೂ ನಿಯಮಿಸುತ್ತಾನೆ. ರುದ್ರದೇವ ರುದ್ರಭೂಮಿಗೆ ಅಭಿಮಾನಿಯಾಗಿದ್ದು ಸಾತ್ವಿಕರ ಶ್ರೇಯಸ್ಸಿಗೆ ರಾಮಮಂತ್ರ ವನ್ನು ಪಠಿಸುತ್ತಾನೆ. ಅವನಿಗೂ ಶ್ರೇಯಃ ಪ್ರದನಾಗಿ ವಾಮನನಿದ್ದಾನೆ. ಹೀಗೆ 14 ಲೋಕಗಳು, ಜಲ ಸ್ಥಳ, ರುದ್ರಭೂಮಿ ಎಂದು ಸಕಲ ಸ್ಥಳಗಳಿಗೂ ನಿಯಾಮಕನಾದ ವಾಮನನ ವ್ಯಾಪ್ತಿ ಪೂರ್ಣ ನಮ್ಮಿಂದ ತಿಳಿಯಲಾಗದು. ಈ ಅರ್ಥದಲ್ಲಿಯೇ **'ಮಾಯಾ ವಟುವಾಮನ'** ಎಂದು ವ್ಯಾಸರು ಹೇಳಿದ್ದಾರೆ. ಸ್ವೇಚ್ಛಾರೂಪಿಯಾದುದುರಿಂದ ಅಗಮ್ಯನಾಗಿದ್ದಾನೆ. ನಮ್ಮಿಂದಮಾತ್ರವಲ್ಲ ದೇವತೆಗಳಿಂದಲೂ ಅಗಮ್ಯನಾಗಿದ್ದಾನೆ.

(ಮುಂದುವರಿಯುವುದು)

ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.

# ಜೀವನಯಜ್ಞ

## ಸ್ಥೂಲಶರೀರಚಿಂತನಯಜ್ಞ

**ಸಂಕಲನ: ಸುನಂದಕೀ**

ನಮ್ಮ ದೇಹದ ಅವಯವಗಳಲ್ಲಿ ಅನೇಕ ರೂಪಗಳಿಂದ ನೆಲೆಸಿದ ಭಗವಂತನು, ಪ್ರಕೃತಿಕಾರ್ಯಗಳಾದ ಇಪ್ಪತ್ತನಾಲ್ಕು ತತ್ವಗಳ ಸಮಷ್ಟಿರೂಪವಾದ ನಮ್ಮ ದೇಹದಲ್ಲಿರುವ ಆ ಇಪ್ಪತ್ತನಾಲ್ಕು ತತ್ವಗಳಲ್ಲಿ ಹಾಗೂ ಆ ತತ್ವಗಳಿಗೆ ಅಭಿಮಾನಿಗಳಾದ (ನಿಯಾಮಕರಾದ) ದೇವತೆಗಳಲ್ಲೂ ನೆಲೆಸಿರುವನು. ಅದರ ಅವಗಾಹನೆಗಾಗಿ–

| **ಶರೀರಗತ ಸ್ಥಾನ** | **ಭಗವದ್ರೂಪ** |
|---|---|
| ಅವ್ಯಕ್ತತತ್ವ | ನಾರಾಯಣ |
| ಗುಣತ್ರಯ | ವಿಶ್ವ,ತೈಜಸ, ಪ್ರಾಜ್ಞ |
| ಮಹತ್ತತ್ವ | ವಾಸುದೇವ |
| ಅಹಂಕಾರತತ್ವ | ಸಂಕರ್ಷಣ |
| ವಿಜ್ಞಾನತತ್ವ | ಪ್ರದ್ಯುಮ್ನ |
| ಮನಸ್ತತ್ವ | ಅನಿರುದ್ಧ |
| ಆಕಾಶ | ನಾರಾಯಣ |
| ವಾಯು | ವಾಸುದೇವ |
| ತೇಜಸ್ | ಸಂಕರ್ಷಣ |
| ಜಲ | ಪ್ರದ್ಯುಮ್ನ |
| ಪೃಥಿವೀ | ಅನಿರುದ್ಧ |
| **ಪಂಚವಿಧ ಮನೋಗೋಳಕವಾದ** | |
| ಹೃದಯ | ಮಾಧವ |
| ದಕ್ಷಿಣಾಕ್ಷಿ | ಪ್ರದ್ಯುಮ್ನ |
| ವಾಮಚಕ್ಷು | ಅನಿರುದ್ಧ |
| ಚಕ್ಷುಗಳ ಗೋಲಕ | ಕಪಿಲ |
| ಕಣ್ಣುಗಳ ಶುಕ್ಲ(ಬಿಳಿ) | ರಾಮ |
| ಕಪ್ಪುಗುಡ್ಡೆ | ಕೃಷ್ಣ |

**ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.**

| | |
|---|---|
| ಶ್ರೋತ್ರೇಂದ್ರಿಯ | ವಾಸುದೇವ |
| ತದ್ಗೋಲಕದ್ವಯ | ಅನಿರುದ್ಧ |
| ಘ್ರಾಣೇಂದ್ರಿಯ | ಪ್ರದ್ಯುಮ್ನ |
| ತದ್ಗೋಲಕ | ನೃಸಿಂಹ |
| ರಸನೇಂದ್ರಿಯ | ಸಂಕರ್ಷಣ |
| ತಗ್ಗೋಲಕಜಿಹ್ವಾಮೂಲ | ಸಂಕರ್ಷಣ |
| ತ್ವಗಿಂದ್ರಿಯ | ಸಂಕರ್ಷಣ |
| ತದ್ಗೋಲಕಚರ್ಮ | ನಾರಾಯಣ |
| ವಾಗಿಂದ್ರಿಯ | ವಾಸುದೇವ |
| ತದ್ಗೋಲಕಮುಖ | ಭಾರ್ಗವ ರಾಮ |
| ಪಾಣೀಂದ್ರಿಯ | ವಾಸುದೇವ, ಸಂಕರ್ಷಣರು |
| ತದ್ಗೋಲಕ ಹಸ್ತದ್ವಯ | ವಾಸುದೇವ, ಸಂಕರ್ಷಣರು |
| ಪಾದೇಂದ್ರಿಯ | ಸಂಕರ್ಷಣ |
| ತದ್ಗೋಲಕ ಪಾದದ್ವಯ | ಸಂಕರ್ಷಣ |
| ಪಾಯ್ವಿಂದ್ರಿಯ | ಪ್ರದ್ಯುಮ್ನ |
| ತದ್ಗೋಲಕಗುದ | ವಾಸುದೇವ |
| ಉಪಸ್ಥೇಂದ್ರಿಯ | ನಾರಾಯಣ |
| ತದ್ಗೋಲಕಮೇಢ್ರ | ವಾಸುದೇವ |
| ಸರ್ವಶರೀರ | ಶರೀರನಾಮಕ |

ಈ ರೀತಿ ಒಂದೊಂದು ಇಂದ್ರಿಯಗಳಲ್ಲೂ, ತತ್ವಗಳಲ್ಲೂ ನೆಲೆಸಿದ ಭಗವಂತನು ಜೀವನಿಗೆ ಚಲನಶಕ್ತಿಯನ್ನು ನೀಡಲು ವಾಸುದೇವನಾಗಿಬ್ರಹ್ಮವಾಯುಗಳಿಂದ ಸಹಿತನಾಗಿ ಮಸ್ತಕದ ಸೀಮೆಯನ್ನು ಸೀಳಿ ಬ್ರಹ್ಮನಾಡಿರಂಧ್ರದ್ವಾರಾ ಶರೀರವನ್ನು ಪ್ರವೇಶಿಸಿ ಅದೇ ದ್ವಾರದೇಶದಲ್ಲಿ ಷಟ್ಕಮಲದಿಂದ ಮೇಲುಭಾಗದಲ್ಲಿ ತಾನೇ ನೆಲೆಸಿದ್ದು ಜೀವನಿಗೆ ಅವಸ್ಥಾತ್ರಯಗಳನ್ನು ನೀಡುವನು. ಧಾರಣಾದ್ಯನೇಕ ಪ್ರಯೋಜನಕ್ಕಾಗಿ ಶರೀರವನ್ನು ಪ್ರವೇಶಿಸಿ ಲೀಲೆಯಿಂದ ತನ್ನ ಬಹುರೂಪಗಳಿಂದ ಪರಮಾಣು ಪ್ರದೇಶವನ್ನೂ ಬಿಡದೆ ಅಂಗ ಪ್ರತ್ಯಂಗಗಳಲ್ಲಿ ವ್ಯಾಪಿಸಿ ಇದ್ದರೂ, ಬ್ರಹ್ಮಾದಿ ದೇವತೆಗಳ ಪ್ರವೇಶಕ್ಕೂ ಆದೇಶಿಸಿದನು. ಆತನ ಅಣತಿಯಂತೆ ಬ್ರಹ್ಮಾದಿದೇವತೆಗಳೂ ಜೀವನಸ್ಥೂಲಶರೀರದ ಎಲ್ಲ ಭಾಗಗಳನ್ನೂ

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ**

ಪ್ರವೇಶಿಸಿದರು. ಆ ಸ್ಥಾನದಲ್ಲಿದ್ದು ಆ ತತ್ವ, ಇಂದ್ರಿಯ ಮೊದಲಾದವುಗಳ ಮೂಲಕ ಜೀವನ ಕಾರ್ಯಕ್ಕೆ ಪ್ರೇರಕರೆನಿಸಿದರು.

| **ಜೀವಶರೀರಗತಸ್ಥಾನ** | **ದೇವತೆಗಳು** |
|---|---|
| ಪೂರ್ಣ ಶರೀರ | ಸ್ವಾಯಂಭುವಮನು |
| ಶರೀರಗತ ಪ್ರಾಣ | ಮುಖ್ಯಪ್ರಾಣದೇವರ ಪ್ರಾಣರೂಪ |
| ಶರೀರಗತ ಅಪಾನ | ಮುಖ್ಯಪ್ರಾಣದೇವರ ಅಪಾನ ರೂಪ |
| ಶರೀರಗತ ವ್ಯಾನ | ಮುಖ್ಯಪ್ರಾಣದೇವರ ವ್ಯಾನ ರೂಪ |
| ಶರೀರಗತ ಉದಾನ | ಮುಖ್ಯಪ್ರಾಣದೇವರ ಉದಾನ ರೂಪ |
| ಶರೀರಗತ ಸಮಾನ | ಮುಖ್ಯಪ್ರಾಣದೇವರ ಸಮಾನ ರೂಪ |
| ಸಾತ್ವಿಕಾದಿಗುಣತ್ರಯ | ಬ್ರಹ್ಮ, ರುದ್ರ, ಇಂದ್ರ & ಸ್ಕಂದ ಮತ್ತು ಅವರ ಪತ್ನಿಯರು |
| ಮಹತ್ತತ್ವ | ಬ್ರಹ್ಮದೇವರು, ಮುಖ್ಯಪ್ರಾಣದೇವರು, ಸರಸ್ವತೀ, ಭಾರತೀದೇವಿಯರು |
| ಅಹಂಕಾರತತ್ವ | ಗರುಡ, ಶೇಷ, ರುದ್ರದೇವರು |
| ಬುದ್ಧಿತತ್ವ | ಸೌಪರಣೀ, ವಾರುಣೀ, ಪಾರ್ವತೀ |
| ಮನಸ್ಸು | ಇಂದ್ರ, ಕಾಮ, ಕಾಮಪುತ್ರ ಅನಿರುದ್ಧ |
| ಜ್ಞಾನೇಂದ್ರಿಯಗಳು | ಪಾರ್ವತೀದೇವಿ |
| ಕರ್ಮೇಂದ್ರಿಯಗಳು | ಆಹಂಕಾರಿಕ ಪ್ರಾಣದೇವರು |
| ಶ್ರೋತ್ರೇಂದ್ರಿಯ | ಚಂದ್ರ, ವರುಣ, ಯಮ, ಕುಬೇರಾದಿದಿಗ್ದೇವತೆಗಳು |
| ಚಕ್ಷುರಿಂದ್ರಿಯ | ಸೂರ್ಯ |
| ರಸನೇಂದ್ರಿಯ | ವರುಣ |
| ಘ್ರಾಣೇಂದ್ರಿಯ | ಅಶ್ವಿನೀದೇವತೆಗಳು |
| ತ್ವಗಿಂದ್ರಿಯ | ವಾಯುಸುತ ಮರುತ್ |
| ವಾಗಿಂದ್ರಿಯ | ಅಗ್ನಿ |
| ಹಸ್ತ | ದಕ್ಷಪ್ರಜಾಪತಿ |
| ಪಾದ | ಜಯಂತ, ಶಚೀಪುತ್ರರಾದ ಯಜ್ಞ & ಶಂಭು |

**ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ**

| | |
|---|---|
| ಪಾಯು | ಮಿತ್ರನಾಮಕ ಸೂರ್ಯ & ಯಮ |
| ಉಪಸ್ಥ | ಸ್ವಾಯಂಭುವಮನು & ಶಿವ |
| ಆಕಾಶ | ಗಣಪತಿ |
| ವಾಯು | ವಾಯುಸುತ ಮರೀಚಿ |
| ಅಗ್ನಿ | 'ಪಾವಕ' ನಾಮ ಅಗ್ನಿ |
| ಜಲ | ವರುಣ |
| ಪೃಥಿವೀ | ಧರಾದೇವಿ, ಶನೈಶ್ಚರ |

ಈ ರೀತಿ ಜೀವನ ಯೋಗ್ಯತೆಗನುಗುಣವಾಗಿ ಧರ್ಮ, ಜ್ಞಾನ ಹಾಗೂ ಫಲಗಳನ್ನು ನೀಡುವುದಕ್ಕೋಸ್ಕರ, ಆ ಜೀವನಿಂದ ಅನೇಕ ವಿಧಕರ್ಮಗಳನ್ನು ಮಾಡಿಸುವ ಮೂಲಕ ಭಗವತ್ಸೇವೆಯನ್ನು ಮಾಡುವ ಬ್ರಹ್ಮಾದಿದೇವತೆಗಳು ಜೀವನಶರೀರದಲ್ಲಿ ನೆಲೆಸಿರುವರು.

(15ನೇ ಪುಟದಿಂದ)

ಪರಿಶ್ರಮದಿಂದ ಅಮೃತ ತಂದಿತ್ತು ಗರುಡ ಅಮ್ಮನನ್ನು ದಾಸ್ಯದಿಂದ ಮುಕ್ತಗೊಳಿಸಿದನು. ವಿಷಯದಾಸ್ಯದಿಂದ ನಾವು ಮುಕ್ತರಾಗಬೇಕಾದರೆ ತತ್ತ್ವಜ್ಞಾನವೆಂಬ ಅಮೃತವನ್ನು ಪರಿಶ್ರಮದಿಂದ ಸಂಪಾದಿಸಬೇಕು. ತಂದೆತಾಯಿಗಳು ಯಾರದೇ ಜೀತದಲ್ಲಿದ್ದರೆ ಮಕ್ಕಳು ಅವರ ಬಿಡುಗಡೆಗೆ ಪ್ರಯತ್ನಮಾಡಬೇಕು. ಅದು ಅವರ ಕರ್ತವ್ಯಕೂಡ ಅಷ್ಟೇ.

(6ನೇ ಪುಟದಿಂದ)

ಹೃದಯದಲ್ಲಿ ಹೋಗಿ ನೀನು ಕುಳಿತುಕೋ ನಿನ್ನ ತಂಟೆಗೆ ಯಾರು ಬರುವುದಿಲ್ಲ ಎಂದು ಹೇಳಿದುದರಿಂದ ಭಗವಂತನು ಪ್ರತಿಯೊಬ್ಬನ ಹೃದಯದಲ್ಲಿಯೂ ಕೂತಿರುತ್ತಾನೆ. ಅಲ್ಲಿ ದೇವರ ವಿಚಾರಕ್ಕೆ ಯಾರು ಹೋಗುವುದಿಲ್ಲವೆಂದರೆ ನಾವು ಬಹಿರ್ಮುಖಿಗಳಾಗಿದ್ದು ಯಾರು ಕೂಡ ಅಂತರ್ಮುಖಿಗಳಾಗಲಿಲ್ಲವೆಂದು ಅರ್ಥ. ಆದ್ದರಿಂದ ನಾವು ಭಗವಂತನ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡು ಅಂತರ್ಮುಖಿಯಾಗಬೇಕು. ಧೃತರಾಷ್ಟ್ರ! ನೀನು ಮೊದಲು ನಿನ್ನ ಬಗ್ಗೆ ವಿಚಾರ ಮಾಡು. ಇನ್ನೊಬ್ಬನಿಗೆ ನೀನು ಕೈತೋರಿಸುವಾಗ, ಮೂರು ಬೆರಳುಗಳು ತಿರುಗಿ ನಿನ್ನನ್ನೇ ತೋರಿಸುತ್ತವೆ. ಆದ್ದರಿಂದ ಬೇರೆಯವರ ಮೇಲೆ ಟೀಕೆ ಟಿಪ್ಪಣಿ ಮಾಡುವ ಪ್ರಸಂಗಕ್ಕೆ ಹೋಗಬೇಡ. ★

**ರಾಮಾಯಣ-ಮಹಾಭಾರತ-ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ.**

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

## ಜನ್ಮವೆಂಬುದು ಅವತಾರ

ಅಪ್ರಾಕೃತನಾದ, ಅವ್ಯಕ್ತನಾದ, ಸರ್ವತ್ರವ್ಯಾಪ್ತನಾದ ಭಗವಂತ ಈ ಪ್ರಾಕೃತ ಪ್ರಪಂಚದಲ್ಲಿ ತನ್ನನ್ನು ಕಾಣಿಸಿಕೊಳ್ಳುವುದೇ ಜನಾರ್ದನನ ಜನನ. ಪ್ರಳಯಜಲಧಿಯಲ್ಲಿ ಆಲದೆಲೆಯ ಮೇಲೆ ಪವಡಿಸಿರುವ ನಾರಾಯಣ ಸೃಷ್ಟಿಕಾಲದಲ್ಲಿ ತಾನು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೂಪದಿಂದ ಕಾಣಿಸಿಕೊಳ್ಳುತ್ತಾನೆ. ವಾಸುದೇವರೂಪದಿಂದ ಮುಕ್ತಿಪ್ರದನಾಗಿ, ಸಂಕರ್ಷಣನಾಗಿ ಶೇಷದೇವರೊಳಗಿದ್ದು ಭೂಮಿಯನ್ನು ಹೊತ್ತವ. ಅನಿರುದ್ಧನಾಗಿ ಜೀವರ ಸ್ಥೂಲ ಶರೀರ ಸೃಷ್ಟಿಗೆ ಕಾರಣವಾದ ಅನಿರುದ್ಧ ಶರೀರವನ್ನು ಹೊಂದಿಸಿ ರಕ್ಷಕನಾಗಿದ್ದು, ಪ್ರದ್ಯುಮ್ನ ರೂಪದಿಂದ, ಸ್ಥೂಲ ಶರೀರವನ್ನು ಸೃಷ್ಟಿ ಮಾಡುವವನಾಗಿ ತನ್ನ ಲೀಲೆಯಿಂದಲೇ ಅವತರಿಸುತ್ತಾನೆ.

**'ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಜೈಮಿನೇ।**

**ಅಭ್ಯುತ್ಥಾನಂ ಅಧರ್ಮಸ್ಯ ತದಾತ್ಮಾನಂ ಸೃಜತ್ಯಸೌ'** ॥

ಮತ್ತೆ ಮತ್ಸ್ಯ ಕೂರ್ಮ, ವರಹಾದಿ ಅವತಾರಗಳಿಂದ ಭಗವಂತ ಮಾಡುವ ವ್ಯಾಪಾರದಿಂದ ಪ್ರಯೋಜನ ಲೋಕಕ್ಕೇ ಹೊರತು ಆತ್ಮಾರಾಮನಾದ ಅವನಿಗೇನೂ ಇಲ್ಲ. ಮತ್ಸ್ಯಾದಿರೂಪಗಳಿಂದ ಭಕ್ತರು ಅವನನ್ನು ಕಂಡಿದ್ದು ಅವನ ಕಾಣ್ಕೆಯೇ ಹೊರತು ಭಗವಂತನಿಗೆ ಪ್ರಾಕೃತ ದೇಹವಿಲ್ಲ. ಪ್ರಾಕೃತ ದೃಷ್ಟಿಗೆ ಅಪ್ರಾಕೃತನಾದ ಭಗವಂತನು ಕಾಣುವುದು ಸಾಧ್ಯವೂ ಇಲ್ಲ. ಅವನು ಕಾಣಿಸಿದ ನಾವು ಕಂಡೆವು. ಅದು ಅವನ ಲೀಲೆ. ಹೀಗೆ ಮೊದಲ ಪ್ರಶ್ನೆಗೆ ಉತ್ತರಿಸಿ ಎರಡನೆಯ ಪ್ರಶ್ನೆಗೆ ಹೀಗೆ ಉತ್ತರಿಸಿದವು.

## ದ್ರೌಪದಿ ಪಂಚವಲ್ಲಭೆಯಾಕಾದಳು?

ಬೃಹಸ್ಪತ್ಯಾಚಾರ್ಯರ ಅನುಪಸ್ಥಿತಿಯಲ್ಲಿ ವಿಶ್ವರೂಪಾಚಾರ್ಯರು ದೇವಪುರೋಹಿತರಾದರು. ಅವರು ಮಾಡಿದ ದೇವಹೇಳನಕ್ಕೆ ಇಂದ್ರ ಅವರನ್ನು ಕೊಂದ. ಪರಿಣಾಮವಾಗಿ ದೇವೇಂದ್ರನಿಗೆ ಬ್ರಹ್ಮಹತ್ಯೆ ಬಂತು. ಇಂದ್ರನ ತೇಜಸ್ಸು ಧರ್ಮನಲ್ಲಿ ಸೇರಿಕೊಂಡಿತು. ಇಂದ್ರ ನಿಸ್ತೇಜನಾದ. ಮಗನ ಮರಣದಿಂದ ತ್ವಷ್ಟ್ರ ಕೋಪಗೊಂಡ. ಇಂದ್ರನ ಮೇಲೆ ಆಭಿಚಾರ ಪ್ರಯೋಗ ಮಾಡಿದ. ಆಭಿಚಾರದಿಂದ ಅವನ ಜಡೆಯಿಂದ ವೃತ್ರ ಹುಟ್ಟಿದ. ಭೀಮಗಾತ್ರನಾದ ಅವನನ್ನು ಇದಿರಿಸುವುದಕ್ಕೆ ಆಗದೇ ದೇವತೆಗಳು ಸಂಧಿಗಾಗಿ

**ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.**

ಸಪ್ತರ್ಷಿಗಳನ್ನು ಕಳುಹಿಸಿದರು. ಇಂದ್ರನಿಗೂ ವೃತ್ರನಿಗೂ ಗೆಳೆತನದ ಒಪ್ಪಂದವಾಯಿತು. ಒಂದು ಸಂಜೆ ಸಮುದ್ರತೀರದಲ್ಲಿ ವಿಹರಿಸುತ್ತಿದ್ದಾಗ ಸಣ್ಣ ವಿಷಯದಲ್ಲಿ ಮತ್ತೆ ಮನಸ್ತಾಪವುಂಟಾಗಿ ದೇವೇಂದ್ರ ಸಮುದ್ರದ ಅಲೆಯಲ್ಲಿ ವಜ್ರವನ್ನು ಅಭಿಮಂತ್ರಿಸಿ ವೃತ್ರನನ್ನು ಕೊಂದ. ಮತ್ತೆ ಇಂದ್ರನಿಗೆ ಪಾಪ ತಟ್ಟಿತು. ಅವನ ತೇಜಸ್ಸು ಬಲಮೂರ್ತಿಯಾದ ವಾಯುದೇವರಲ್ಲಿ ಸೇರಿಕೊಂಡಿತು. ಮತ್ತೊಮ್ಮೆ ಅಹಲ್ಯಾಧರ್ಷಣದಿಂದುಂಟಾದ ಪಾಪ ಮುತ್ತಿದಾಗ ಇಂದ್ರತೇಜಸ್ಸು ಅಶ್ವಿನೀ ದೇವತೆಗಳನ್ನು ಪ್ರವೇಶಿಸಿತು. ಇಂದ್ರ ದುರ್ಬಲನಾದಾಗ ಅಸುರರು ಜಯಾಕಾಂಕ್ಷಿಗಳಾಗಿ ಭೂಮಿಯಲ್ಲಿ ಕ್ಷತ್ರಿಯರಾಗಿ ಹುಟ್ಟಿದರು. ದುಷ್ಟಕ್ಷತ್ರಿಯರಿಂದ ಭೂಮಿ ಭಾರವಾದಾಗ ಭೂಮಿದೇವಿ ಮೇರುಪರ್ವತದಲ್ಲಿ ದೇವತೆಗಳ ಮೊರೆ ಹೋದಳು. ದೈತ್ಯರು ಕ್ಷತ್ರಿಯರಾಗಿ ಹುಟ್ಟಿದ್ದಾರೆ. ಅವರ ಪೀಡೆಯನ್ನು ಸಹಿಸಲಾರೆ ಎಂದಾಗ ದೇವತೆಗಳೆಲ್ಲರೂ ಅಸುರರ ಹನನಕ್ಕಾಗಿ ಹುಟ್ಟುವ ತೀರ್ಮಾನ ಮಾಡಿದರು. ಆಗ ಧರ್ಮದ ಸ್ಥಾಪನೆಗೆ ಧರ್ಮರಾಜ ತನ್ನಲ್ಲಿದ್ದ ಇಂದ್ರತೇಜಸ್ಸನ್ನು ಹೊರಗೆಡಹಿದ. ಅದು ಕುಂತಿಯಲ್ಲಿ ಪ್ರವೇಶಿಸಿ ಯುಧಿಷ್ಠಿರನೆಂದು ಹೆಸರನ್ನು ಪಡೆಯಿತು. ಹಾಗೆಯೇ ವಾಯುವಿನಿಂದ ಭೀಮ, ಸ್ವತಃ ಇಂದ್ರ ತಾನೆ ಅರ್ಜುನನಾಗಿ ಅಶ್ವಿನಿದೇವತೆಗಳು ನಕುಲಸಹದೇವರಾಗಿ ಭೂಮಿಯಲ್ಲಿ ಹುಟ್ಟಿದರು. ಹೀಗೆ ಇಂದ್ರತೇಜಸ್ಸನ್ನು ಪಡೆದಿರುವ ಪಾಂಡವರಿಗೆ ದ್ರೌಪದಿ ಮಡದಿಯಾದಳು. ದೇಹಗಳು ಐದಿದ್ದರೂ ತೇಜಸ್ಸು ಒಬ್ಬನೇ ಇಂದ್ರನದು ಎಂದು ಸಮಾದಾನ ಹೇಳಿದವು.

(ಇಲ್ಲಿ ಇಂದ್ರತೇಜಸ್ಸೇ ಎಲ್ಲಾ ಪಾಂಡವರಲ್ಲಿ ಎನ್ನುವುದು ಸ್ವಲ್ಪ ಗೊಂದಲವಾದರೂ ಸ್ವಲ್ಪ ವಿವೇಚಿಸಿದಾಗ **'ಶಕ್ರಸ್ಯೈವ ಸಾ ಪತ್ನೀ ಕೃಷ್ಣಾನಾನ್ಯಸ್ಯ ಕಸ್ಯಚಿತ್'** ಎಂಬ ವಾಕ್ಯಕ್ಕೆ ಈ ರೀತಿ ಹೇಳಬಹುದು. ಪಾಂಡವರಲ್ಲಿ ಐದು ಮಂದಿಯೂ ಕೂಡ ಇಂದ್ರ ಪದವಿಯಲ್ಲಿದ್ದವರೇ. ಇಂದ್ರತೇಜಸ್ಸು ಎಂದರೇ ವಾಯುದೇವರ ಅಂಶವೆಂದೇ ಅರ್ಥ. ಇಲ್ಲಿ ಕಂಡದ್ದು ದ್ರೌಪದಿ ಒಬ್ಬಳೇ ಆದರೂ ಇದ್ದದ್ದು ಐದು ಮಂದಿ. ಪಾಂಡವರು ಐದು ಜನರಿದ್ದರೂ ಅವರಲ್ಲಿ ಅನುಸ್ಯೂತವಾಗಿ ದ್ರೌಪದಿಗೆ ಪತಿಯಾಗಿದ್ದವರು ವಾಯುದೇವರೊಬ್ಬರೇ. ಪರಪುರುಷ ಸಂಪರ್ಕವಾಗಲೆಂದು ಬ್ರಹ್ಮನಿಂದ ಶಪ್ತರಾದ ಶ್ಯಾಮಲಾ, ಶಚೀ, ಉಷಾ, ಪಾರ್ವತಿ ಈ ನಾಲ್ಕು ಮಂದಿ ವಾಯುದೇವರಲ್ಲಿ ದೇಹಸಂಸರ್ಗವನ್ನು ಬಯಸಿ ಭಾರತೀದೇವಿಯಲ್ಲಿ ಕೇಳಿಕೊಂಡಾಗ ದ್ರೌಪದಿಯಾಗಿ ಭಾರತಿ ಕಾಣಿಸಿಕೊಂಡಳು. ಆ ಭಾರತೀ ಶರೀರದಲ್ಲಿ ಈ ನಾಲ್ಕು ಮಂದಿ ತಾವೂ ಸೇರಿಕೊಂಡು ತಮ್ಮ ಪತಿಗಳಾದ ಧರ್ಮಾದಿಗಳನ್ನು ರಮಿಸುವಾಗ ಅನುಸ್ಯೂತವಾಗಿ ಅವರೊಳಗಿದ್ದ ವಾಯುದೇವರ ಸಂಪರ್ಕವಾಗಿದೆ. ಮತ್ತೆ ಈ ಕಥೆಯೇ ಮೋಹಕ. ಅಹಲ್ಯಾಧರ್ಷಣಾದಿಗಳಿಂದ ಇಂದ್ರನಲ್ಲಿ ಯಾವ ಪರಿಣಾಮವೂ ಉಂಟಾಗಿಲ್ಲ)

**(ಸಶೇಷ)**

**ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.**

# ಭಗವಂತನನ್ನು ಒಪ್ಪದ ಮತಗಳಿಂದ ಯಾವುದೇ ಪ್ರಯೋಜನವಿಲ್ಲ

–ಅನಂತಕೃಷ್ಣಾಚಾರ್ಯ,ಉಡುಪಿ

ಆಚಾರ್ಯರು ತಮ್ಮ ಉಪನ್ಯಾಸಭಾರತಿಯನ್ನು ಮುಂದುವರಿಸುತ್ತ– ಮಾಯಾವಾದಿಗಳು ವೇದದಲ್ಲಿ ಹೇಳಿರುವ ಪ್ರಪಂಚ ಸತ್ಯತ್ವ, ಭಗವಂತನ ಗುಣಪೂರ್ಣತ್ವ ಮುಂತಾದ ವಿಚಾರಗಳನ್ನೆಲ್ಲಾ ಅಲ್ಲಗಳೆಯುವವರು. ಆದ್ದರಿಂದ ವಿದ್ವಾಂಸರು ಮಾಯಾವಾದಿಗಳನ್ನು ಶೂನ್ಯವಾದಿಗಳಾದ ಬೌದ್ಧರೆಂದೇ ಪರಿಗಣಿಸಬಹುದು. ಆದ್ದರಿಂದ ಬೌದ್ಧಮತವನ್ನು ನಿರಾಕರಿಸುವುದರಿಂದಲೇ ಅದ್ವೈತಮತ (ಮಾಯಾವಾದ)ವನ್ನು ನಿರಾಕರಿಸಿದಂತಾಯಿತು.

ಮಾಯಾವಾದಿ ಹೀಗೆ ಹೇಳಬಹುದು. 'ನಮಗೂ ಬೌದ್ಧಮತಕ್ಕೂ ಬಹಳ ವ್ಯತ್ಯಾಸವಿದೆ. ಬೌದ್ಧರು ಜಗತ್ತಿನ ಸೃಷ್ಟಿಗೆ ಕಾರಣವಾದ ಶೂನ್ಯವನ್ನು ಅಸತ್ (ಸುಳ್ಳು) ಎನ್ನುತ್ತಾರೆ. ನಾವಾದರೋ ಜಗತ್ತಿನ ಸೃಷ್ಟಿಗೆ ಕಾರಣವಾದ ಬ್ರಹ್ಮವನ್ನು ಸತ್ಯವೆಂದು ಹೇಳುತ್ತೇವೆ' ಎಂದು.

ಇದು ಸರಿಯಲ್ಲ. ಬೌದ್ಧರ ಶೂನ್ಯಕ್ಕೂ ಮಾಯಾವಾದಿಗಳ ಬ್ರಹ್ಮಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಮಾಯಾವಾದಿಗಳು ಬ್ರಹ್ಮನು ಅಖಂಡ ಅಥವಾ ನಿರ್ವಿಶೇಷ ಎಂದು ಹೇಳುತ್ತಾರೆ. ಅಂದರೆ ಯಾವ ವಿಶೇಷವೂ ಇಲ್ಲದೆಂದು ಹೇಳಿದಂತಾಯಿತು. ಅಂತಹ ನಿರ್ವಿಶೇಷಬ್ರಹ್ಮನಲ್ಲಿ 'ಇರುವಿಕೆ (ಸತ್ಯತ್ವ)' ಎಂಬ ವಿಶೇಷವಾದರೂ ಹೇಗೆ ಬಂದೀತು? ಸತ್ಯತ್ವ ಇದೆ ಎಂದಾದರೆ ಬ್ರಹ್ಮನಲ್ಲಿ ವಿಶೇಷವನ್ನು ಒಪ್ಪಿದಂತಾಗಿ ಬ್ರಹ್ಮ ಸವಿಶೇಷನಾದನಷ್ಟೆ. ಬ್ರಹ್ಮ ನಿರ್ವಿಶೇಷನೆಂಬ ನಿನ್ನ ವಾದ ಸುಳ್ಳಾಯಿತಷ್ಟೆ. ಬ್ರಹ್ಮನಲ್ಲಿ (ಸತ್ಯತ್ವ) 'ಇರುವಿಕೆ' ಎಂಬ ವಿಶೇಷವೂ ಇಲ್ಲವೆನ್ನುವುದಾದರೆ ಬ್ರಹ್ಮನೇ ಇಲ್ಲವೆಂದಾಯಿತಷ್ಟೆ. ಏಕೆಂದರೆ ಇರುವಿಕೆಯೇ ಇಲ್ಲದ ವಸ್ತು ಇಲ್ಲವೆಂದೇ ಅರ್ಥ. ಹೀಗೆ ಬೌದ್ಧರ ಶೂನ್ಯದಂತೆ ಮಾಯಾವಾದಿಗಳ ಬ್ರಹ್ಮವೂ 'ಅಸತ್' ಎಂದೇ ಆಯಿತು. ಇಂತಹ ಅಸತ್ತಾದ ಶೂನ್ಯವಾಗಲಿ, ಅಖಂಡವಾದ ಬ್ರಹ್ಮವಾಗಲಿ ಕೇಳಿ ತಿಳಿಯಲು, ತಿಳಿದು ಚಿಂತಿಸಲು ಸಾಧ್ಯವಿಲ್ಲದ್ದು. ಏಕೆಂದರೆ ಬೌದ್ಧರ ಶೂನ್ಯ–ಅದ್ವೈತಿಗಳ ಬ್ರಹ್ಮದಲ್ಲಿ ನಮ್ಮ ಚಿಂತನೆಗೆ ಸಿಲುಕುವ ಯಾವ ಧರ್ಮವೂ ಇಲ್ಲ. ಇದೊಂದು ಆಕಾಶದಲ್ಲರಳಿದ ಹೂವಿನಂತೆ. ಆಕಾಶದಲ್ಲಿ ಹೂವು ಅರಳುವುದೇ ಸುಳ್ಳು. ಇನ್ನು ಅದರ ರೂಪ, ಪರಿಮಳದ ಬಗ್ಗೆ ಹೇಳಲಿಕ್ಕುಂಟೇ? ಹೀಗೆ ಶೂನ್ಯ–ಬ್ರಹ್ಮವೇ

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ.

ಸುಳ್ಳಾದ ಬಳಿಕ ಅದನ್ನು ತಿಳಿಯುವುದೆಂತು? ತಿಳಿದು ಪ್ರಯೋಜನವಾದರೂ ಏನು? ಆದ್ದರಿಂದ ಇಂತಹ ಮಾಯಾವಾದ, ಬೌದ್ಧಮತವೇ ಮುಂತಾದ ಮತಗಳು ಚಿಂತಿಸಲು ಅಯೋಗ್ಯವಾದ ಮತಗಳೆಂದಾಯಿತು. ಹೀಗೆ ಭಗವಂತನನ್ನು ಅಲ್ಲಗಳೆಯುವ ಮತಗಳಾವುವೂ ಚಿಂತಿಸಲು ಯೋಗ್ಯವಾದವುಗಳಲ್ಲ. ಅದರಿಂದ ಪ್ರಯೋಜನವೂ ಇಲ್ಲ.

## ವೇದಗಳು ಪರಮಪ್ರಮಾಣ

ಭಗವಂತನ ಬಗ್ಗೆ ಯಥಾರ್ಥವಾಗಿ ತಿಳಿಯಲು ಇರುವ ಏಕೈಕ ಸಾಧನವೇ ವೇದಗಳು. ವೇದಗಳು ಪ್ರಮಾಣಗಳೆಂದು ಒಪ್ಪದಿದ್ದರೆ ಧರ್ಮಾಧರ್ಮಗಳಿಗೆ ಪ್ರಮಾಣವೇ ಇಲ್ಲವೆಂದಾಯಿತು. ವಸ್ತುತಃ ಪ್ರತಿಯೊಬ್ಬ ಮತಾಚಾರ್ಯರು ತಮ್ಮ ಸಿದ್ಧಾಂತದ ಅಸ್ತಿತ್ವಕ್ಕಾಗಿ ಧರ್ಮಾಧರ್ಮಗಳನ್ನು ಅವಶ್ಯವಾಗಿ ಒಪ್ಪಲೇಬೇಕಾಗುತ್ತದೆ. ಇಲ್ಲದಿದ್ದರೆ ಅವನ ಸಿದ್ಧಾಂತಕ್ಕೆ ಯಾವ ವಿಷಯವೂ ಇರದು. ಪ್ರಯೋಜನವೂ ಇರದು. ಈ ಧರ್ಮಾಧರ್ಮಗಳಾದರೋ ಪ್ರತ್ಯಕ್ಷಕ್ಕೆ ನಿಲುಕುವಂಥಾದ್ದಲ್ಲ. ಇವು ಅತೀಂದ್ರಿಯವಾದುವುಗಳು. ಇದು ಧರ್ಮ, ಇದು ಅಧರ್ಮ ಎಂಬುದಕ್ಕೆ ಏನಾದರೂ ಮಾನದಂಡ ಬೇಕಾಗುತ್ತದೆ. ಪ್ರತ್ಯಕ್ಷ ಮಾನದಂಡವಾಗದು, ಏಕೆಂದರೆ ಕೇವಲ ನೋಡುವುದರಿಂದಲೆ 'ಇದು ಧರ್ಮ ಇದು ಅಧರ್ಮ' ಎಂದು ಗುರುತಿಸಲು ಸಾಧ್ಯವಿಲ್ಲ. ಇನ್ನು ಅನುಮಾನದಿಂದ ತಿಳಿಯಲು ಸಾಧ್ಯವೇ ಇಲ್ಲ. ಏಕೆಂದರೆ ಗಟ್ಟಿಯಾದ ಆಧಾರವಿಲ್ಲದ ಅನುಮಾನ ಪ್ರಯೋಜನವಿಲ್ಲ. ಒಬ್ಬ ತನ್ನ ಬುದ್ಧಿಬಲದಿಂದ ಇದು ಧರ್ಮ, ಇದು ಅಧರ್ಮವೆಂದು ಹೇಳಿದರೆ ಮತ್ತೊಬ್ಬ ತನ್ನ ಬುದ್ಧಿವಂತಿಕೆಯಿಂದ ಮತ್ತೊಂದನ್ನು ಹೇಳಬಹುದು. ಹೀಗೆ ಹತ್ತುಮಂದಿ ಹತ್ತುಬಗೆಯಿಂದ ಧರ್ಮಾಧರ್ಮಗಳನ್ನು ವಿಶ್ಲೇಷಿಸಬಹುದು. ಎಲ್ಲವೂ ಧರ್ಮವಾಗಲು ಸಾಧ್ಯವಿಲ್ಲ. ಯಾವುದಾದರೊಂದು ಧರ್ಮವಾಗಬಹುದು. ಅದ್ಯಾವುದು? ಅದಕ್ಕೆ ಆಧಾರವೇನು? ಎಂಬ ಪ್ರಶ್ನೆ ಬಂದಾಗ ಉತ್ತರವಿಲ್ಲದಂತಾಗಿ ಎಲ್ಲ ಅನುವಮಾನಗಳೂ ವ್ಯರ್ಥವಾಗುತ್ತವೆ. ಅದಕ್ಕಾಗಿ ಧರ್ಮಾಧರ್ಮಗಳಿಗೆ ಗಟ್ಟಿಯಾದ ಆಧಾರವಾಗಿ ವೇದಗಳನ್ನು ಒಪ್ಪಲೇಬೇಕಾಗುತ್ತದೆ. ಧರ್ಮಾಧರ್ಮಗಳನ್ನು ಇಲ್ಲವೆಂದು ಅಲ್ಲಗಳೆಯುವ ನಾಸ್ತಿಕನಿಗೂ ವೇದಗಳನ್ನು ಒಪ್ಪದಿದ್ದರೆ ಧರ್ಮಾಧರ್ಮಗಳು ಇಲ್ಲವೆಂದು ಸಾಧಿಸಲೂ ಸಾಧ್ಯವಾಗದು. ಏಕೆಂದರೆ ಮೊದಲು ಧರ್ಮಾಧರ್ಮಗಳ ಬಗ್ಗೆ ತಿಳಿದ ಬಳಿಕವಷ್ಟೆ ಅದನ್ನು ಖಂಡಿಸಲು ಸಾಧ್ಯ. ಅದಾದರೂ ವೇದಗಳಿಂದಲೇ ತಿಳಿಯಲ್ಪಡಬೇಕು. ಹೀಗೆ ಧರ್ಮಾಧರ್ಮಗಳ ವಿಷಯದಲ್ಲಿ ಅಪೌರುಷೇಯವಾದ ವೇದವೇ ಪರಮಪ್ರಮಾಣವೆಂದು ಎಲ್ಲರೂ ಒಪ್ಪಬೇಕಾಗುತ್ತದೆ.

(ಸಶೇಷ)

ದೀನ-ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ.

ಭಾಗ–7

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ವೇದವ್ಯಾಸರು ಭಾಗವತದ ಆದಿಯಲ್ಲಿ **'ನಿಗಮಕಲ್ಪತರೋರ್ಗಲಿತಂ ಫಲಂ... ಭಾಗವತಂ ಆಲಯಂ ಮುಹುಃ ಪಿಬತ'** ಎಂದು ಹೇಳಿರುವರು. ಇಲ್ಲಿಯ ಭಾಗವತಂ ಎಂಬ ಶಬ್ದವು ವಿಸ್ತೃತವಾದ ಅರ್ಥದಲ್ಲಿ ಪ್ರಯುಕ್ತವಾಗಿದೆ. ವ್ಯಾಸರು ತಮ್ಮಿಂದ ರಚಿತಗಳಾದ ಎಲ್ಲ ಪುರಾಣಗಳಿಗೂ, ಆ ಆ ಪುರಾಣಗಳಲ್ಲಿ ಬರುವ ಪ್ರಧಾನ ಪಾತ್ರವನ್ನೋ, ವಿಷಯವನ್ನೋ, ಅಥವಾ ಫಲವನ್ನೋ ಆಧರಿಸಿ ಹೆಸರುಗಳನ್ನಿಟ್ಟಿರುವರು. ಭಾಗವತಕ್ಕೆ ಮಾತ್ರ ವ್ಯಾಪಕವಾದ ಅರ್ಥದಲ್ಲಿ ಹೆಸರಿಟ್ಟಿರುವರು. ಇದರಿಂದ ಸಾಧನೆಗೆ ಉಪಯುಕ್ತವಾದ ಒಂದು ಅಪೂರ್ವ ಪ್ರಮೇಯವನ್ನೇ ತಿಳಿಸಿರುವರು. **'ಭಗವತಃ ಇದಂ ಭಾಗವತಂ'** ಭಗವಂತನೊಡನೆ ಸಂಬಂಧ ಬೆಳಸಿಕೊಂಡ ಎಲ್ಲವೂ ಭಾಗವತವೇ. ಚರಾಚರಾತ್ಮಕವಾದ ಜಗತ್ತೆಲ್ಲವು ಭಗವಂತನಿಂದಲೇ ಹುಟ್ಟಿ, ಭಗವಂತನಿಂದ ವ್ಯಾಪ್ತವಾಗಿ, ಭಗವಂತನಿಂದ ಸ್ಥಿತಿಪಡೆದು ಕೊನೆಯಲ್ಲಿ ಭಗವಂತನನ್ನೇ ಸೇರುವುದು. ಭಗವಂತನ ಸಂಪರ್ಕವಿಲ್ಲದ ವಸ್ತುವಿಲ್ಲ. ಎಲ್ಲವೂ ಭಗವಂತನದ್ದೆ **'ಈಶಾವಾಸ್ಯ ಮಿದಂ ಸರ್ವಂ'**

**ಯತೋ ಭೂತಾನಿ ಜಾಯಂತೇ ಯೇನ ಸರ್ವಮಿದಂ ತತಂ ।**
**ಯೇನ ಜಾತಾನಿ ಜೀವಂತಿ ಯಂ ಪ್ರಾಪ್ಸ್ಯಂತಿ ಮಹಾಲಯೇ ॥**

ಈ ಮರ್ಮವನ್ನರಿತು, ಎಲ್ಲೆಲ್ಲೂ ಭಗವಂತನನ್ನು ಕಾಣುವ ಸಾಧಕನಿಗೆ, ವಿಶ್ವದಲ್ಲಿರುವ ಚೇತನಾ ಚೇತನಗಳೆಲ್ಲವೂ ಭಾಗವತವೇ ಸರಿ. ಈ ಅರಿವಿನಲ್ಲಿ ಮುಡಿದ ಭಾಗವತದ ಸೇವೆಯಿಂದ ಕೈವಲ್ಯವು ಕರತಲಾಮಲಕವಾಗುವುದು.

ವ್ಯಾಸರು ಭಾಗವತವನ್ನು ನಿಗಮವೆಂಬ ಕಲ್ಪವೃಕ್ಷದಿಂದ ಕೆಳ ಬಿದ್ದ ಫಲವನ್ನಾಗಿ ವರ್ಣಿಸಿರುವರು. ನಿಜ, ಭಾಗವತವು ವೇದಸಂಬಂಧಿಯಾಗಿದ್ದು ವೇದದ ನಿಜಾರ್ಥಗಳನ್ನು ತನ್ನೊಳಗಡಗಿಸಿಕೊಂಡ ಅಪೂರ್ವ ಪುರಾಣ. ಈ ನಿಟ್ಟಿನಲ್ಲಿ ವೇದಾರ್ಥಪರಿಬೃಂಹಿತಗಳಾಗಿದ್ದು ಭಗವತ್ತತ್ತ್ವಪ್ರತಿಪಾದಕಗ್ರಂಥಗಳೆಲ್ಲವೂ ವೇದದ ನಿಜಾರ್ಥವನ್ನು ಎತ್ತಿ ತೋರಲು ಹೊರಟ ಗ್ರಂಥಗಳು. ಶ್ರೀಮಧ್ವಾಚಾರ್ಯರ ಗ್ರಂಥಗಳಿಗಲ್ಲದೆ ಅಕ್ಷರಶಃ ಸತ್ಯತಃ ವೇದಗಳ ಸಂಪೂರ್ಣ ಸಂಪರ್ಕ ಮತ್ತಿತರ ಮತಾಚಾರ್ಯರ ಗ್ರಂಥಗಳಿಗೆ ಇಲ್ಲ. ಕಾರಣ ವೇದಾರ್ಥಗಳನ್ನು ತಮ್ಮ ಪ್ರತಿವಾಕ್ಯಗಳಲ್ಲಿ ಅಡಗಿಸಿಕೊಂಡ ಆಚಾರ್ಯಮಧ್ವರ ಹಾಗೂ ಅವರ ಶಿಷ್ಯ ಪ್ರಶಿಷ್ಯರ ಗ್ರಂಥಗಳೆಲ್ಲವೂ ನಿಜವಾದ ಅರ್ಥದಲ್ಲಿ ಭಾಗವತಗಳೇ ಸರಿ. ಇಂಥಾ ಭಾಗವತಗಳ ಪರಂಪರೆಗೆ

ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,

ಸೇರಿದುದೇ ಜಗನ್ನಾಥದಾಸರ 'ಹರಿಕಥಾಮೃತಸಾರ'.

ಶಬ್ದತಃ ಅರ್ಥತಃ ಭಗವಂತನೊಡನೆ ನಿಕಟಸಂಬಂಧವನ್ನೇರ್ಪಡಿಸಿಕೊಂಡ ಹರಿಕಥಾಮೃತಸಾರಗ್ರಂಥವು ಈ ದೃಷ್ಟಿಯಲ್ಲಿ ಭಾಗವತವೆನಿಸಿದರೆ, ಪ್ರತಿಪದ್ಯದಲ್ಲಿ ವೇದಾರ್ಥವನ್ನು ಪ್ರತಿಪಾದಿಸುವುದರಿಂದಲೂ ಶ್ರೀಹರಿಕಥಾಮೃತಸಾರಗ್ರಂಥವು ಭಾಗವತವೆನಿಸಿಕೊಳ್ಳುತ್ತದೆ. ತನ್ನನ್ನು ಸೇವಿಸುವ ಸಕಲ ಸಜ್ಜನರನ್ನು ಮೋಕ್ಷಕ್ಕೆ ಕರೆದೊಯ್ಯುವ ಭಾಗವತದಂತೆ ಶ್ರೀಹರಿಕಥಾಮೃತಸಾರಗ್ರಂಥವು ಸಹ ಬಿಂಬಾಪರೋಕ್ಷಮಾರ್ಗಕ್ಕೆ ದಾರಿದೀಪವಾಗಬಲ್ಲದು.

**'ಸರ್ವೇ ವೇದಾಃಯತ್ಪದಮಾಮನಂತಿ' , 'ವೇದೈಶ್ಚ ಸರ್ವೈಃ ಅಹಮೇವ ವೇದ್ಯಃ'** ಎಂಬಿವೇ ಮುಂತಾದ ವಚನಗಳ ಹೇಳಿಕೆಯಂತೆ ಮುಖ್ಯತಃ ಶ್ರೀಹರಿಯ ಕಥಾಪ್ರತಿಪಾದಕಗಳು ವೇದೋಪನಿಷತ್ತುಗಳು. ಇದರಿಂದಾಗಿಯೇ ಇವು 'ಅಮೃತ' ಶಬ್ದ ವಾಚ್ಯಗಳಾಗಿರುವುದು. ಇಂತಾ ವೇದೋಪನಿಷತ್ತುಗಳ ಸಾರಭೂತವಾದುದು 'ಹರಿಕಥಾಮೃತಸಾರ'. ಈ ರಹಸ್ಯ ಪ್ರತಿಪಾದನೆಗಾಗಿಯೇ ಮಾನ್ಯ ಮಾನವೀ ಜಗನ್ನಾಥದಾಸರು ತಮ್ಮ ಗ್ರಂಥಕ್ಕೆ 'ಹರಿಕಥಾಮೃತಸಾರ' ಎಂಬ ಹೆಸರನ್ನು ಆಯ್ಕೆ ಮಾಡಿದರು. ಒಟ್ಟಿನಲ್ಲಿ ಹೇಳುವುದಾದಲ್ಲಿ ಶ್ರೀಮದ್ಧರಿಕಥಾಮೃತಸಾರ ಗ್ರಂಥವು ಭಾಗವತಕ್ಕೆ ಪ್ರತಿಬಿಂಬವಾಗಿರುವುದು. ಈ ಮಾತುಗಳು ಕಲ್ಪನೆಗಳಲ್ಲ. ಇದಕ್ಕೆ ಹರಿಕಥಾಮೃತಸಾರವ್ಯಾಖ್ಯಾನ ಕರ್ತೃಗಳಲ್ಲೊಬ್ಬರಾದ ಶ್ರೀಪದ್ಮನಾಭದಾಸರೇ ಸಾಕ್ಷಿ. ಈ ಮಹನೀಯರ ವ್ಯಾಖ್ಯಾನದಲ್ಲಿ ಯಾವ ಪದ್ಯದ ವ್ಯಾಖ್ಯಾನವನ್ನು ನೋಡಿದರೂ ಅಲ್ಲಿ ಭಾಗವತವೇ ಎದ್ದು ತೋರುತ್ತದೆ. ಸ್ವತಃ ಜಗನ್ನಾಥದಾಸರು ಸಹ 'ಕ್ರೀಡಾವಿಲಾಸ' ಸಂಧಿಯಲ್ಲಿ–

ರೋಗಿಯೌಷಧ–ಪಥ್ಯದಿಂದ ನಿ–
ರೋಗಿಯೆನಿಸುವ ತೆರದಿ ಶ್ರೀಮ–
ದ್ಭಾಗವತ ಸುಶ್ರವಣಗೈದು ಭವಾಖ್ಯ ರೋಗವನು
ನೀಗಿ ಶಬ್ದಾದ್ಯ ಖಿಳ ವಿಷಯ ನಿ–
ಯೋಗಿಸು ದಶೇಂದ್ರಿಯವ ನಿಲನೋಳ್
ಶ್ರೀಗುರು ಜಗನ್ನಾಥವಿಠಲ ಪ್ರೀತನಾಗುವನು॥

ಎಂದು ಹೇಳುತ್ತಾ ತಮ್ಮ ಗ್ರಂಥವನ್ನು 'ಭಾಗವತ' ಎಂದೇ ಸಂಬೋಧಿಸಿರುವರು. ಭಾಗವತಾತ್ಮಕವಾದ ಹರಿಕಥಾಮೃತಸಾರ ಗ್ರಂಥದಲ್ಲಿರುವ ಮುವತ್ತೆರಡುಸಂಧಿಗಳು ದ್ವಾತ್ರಿಂಶಲ್ಲಕ್ಷಣೋಪೇತನಾದ ಶ್ರೀಹರಿಯ ಮಂದಿರಕ್ಕೆ ಕೊಂಡೊಯ್ಯ ಬಲ್ಲ ಮೆಟ್ಟಲುಗಳು.

**(ಸಶೇಷ)**

**ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.**

ಪುರಾಣ ಪರಿಚಯ

ಭಾಗ–27

# ಶ್ರೀವಿಷ್ಣುಪುರಾಣ

## ಬ್ರಹ್ಮಪಾರ ಸ್ತೋತ್ರ

–ಸ್ಫೂರ್ತಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಬ್ರಹ್ಮ ಪ್ರಭುಃ–** ಜೀವರಾಶಿಗಳಲ್ಲೆ ಹೆಚ್ಚು ಪರಿಪೂರ್ಣನೆನಿಸಿದ ಚತುರ್ಮುಖ ಬ್ರಹ್ಮನಿಗೂ ಶ್ರೀಹರಿಯು ಒಡೆಯನಾಗಿದ್ದಾನೆ, ಚತುರ್ಮುಖಬ್ರಹ್ಮನು ಉಳಿದ ಜೀವರಾಶಿಗಳಿಗೆ ಒಡೆಯನಾಗುವಂತೆ ಅನುಗ್ರಹಿಸಿದ್ದಾನೆ.

**ಬ್ರಹ್ಮ–** ಶ್ರೀಹರಿಯು ಪರಿಪೂರ್ಣನಾಗಿದ್ದಾನೆ,

**ಸಃ ಸರ್ವಭೂತಃ–** ಅವನೇ ಸಮಸ್ತ ವಸ್ತುಗಳೊಳಗೆ ವ್ಯಾಪಿಸಿ ನೆಲೆಸಿದ್ದಾನೆ. ಎಲ್ಲಕ್ಕೂ ಆಶ್ರಯನಾಗಿದ್ದಾನೆ.

**ಬ್ರಹ್ಮ ಪ್ರಜಾನಾಂ ಪತಿಃ–** ಬ್ರಹ್ಮರೂಪದಿಂದ ಚತುರ್ಮುಖನೊಳಗಿದ್ದು ತಾನೇ ಪ್ರಜಾಪತಿ ಎನಿಸಿಕೊಂಡಿದ್ದಾನೆ. ಅಥವಾ **ಪ್ರಜಾನಾಂ ಬ್ರಹ್ಮ ಪತಿಃ**–ಸಮಸ್ತ ಜೀವರಾಶಿಗಳಿಗೆ ಎಂದೆಂದಿಗೂ ಎಲ್ಲೆಡೆಯೂ ನೆಲೆಸಿ ಪರಿಪೂರ್ಣನಾದ ಒಡೆಯ ಆಗಿರುವವನು ಈತನೆ. ಉಳಿದ ಬ್ರಹ್ಮಾದಿಗಳು ಜೀವರಿಗೆ ಒಡೆಯರೆನಿಸಿದರೂ ಇವನಷ್ಟು ಪರಿಪೂರ್ಣರಲ್ಲ. ಶ್ರೀಹರಿಯಾದರೋ ಎಲ್ಲ ವಿಧದಿಂದಲೂ ಪರಿಪೂರ್ಣನಾಗಿದ್ದು ಪರಿಪೂರ್ಣವಾದ ರಕ್ಷಣೆಯನ್ನು ಜೀವರಿಗೆ ನೀಡುತ್ತಿದ್ದಾನೆ. ಅಥವಾ **ಬ್ರಹ್ಮಪ್ರಜಾನಾಂ ಪತಿಃ–** ಬ್ರಹ್ಮಪ್ರಜೆಗಳೆಂದರೆ ಭಗವಂತನನ್ನು ಪರಿಪೂರ್ಣನೆಂದು ತಿಳಿದು ಪ್ರಕೃಷ್ಟರಾಗಿರುವ ಭಗವಂತನ ಪರಮಭಕ್ತರು. ಅವರನ್ನು ಯಾವತ್ತೂ ರಕ್ಷಿಸುವವನು.

**ಅಸೌ ಅಚ್ಯುತಃ–** ಶ್ರೀಹರಿಯೇ ಯಾವ ಬಗೆಯ ಚ್ಯುತಿ ಇಲ್ಲದವ. ಎಂದಿಗೂ ಸರ್ವೋತ್ತಮ ಸ್ಥಾನದಿಂದ ಜಾರದವನು. ಚ್ಯುತಿ ಇಲ್ಲದ ಮೋಕ್ಷಪದವಿಯನ್ನು ಕರುಣಿಸುವವನು.

**ಸಃ ವಿಷ್ಣುಃ ಅವ್ಯಯಂ ಬ್ರಹ್ಮ–** ಎಲ್ಲೆಡೆಯೂ ತುಂಬಿರುವ ಶ್ರೀಹರಿಯು ಯಾವ ಬಗೆಯ ನಾಶವೂ ಇಲ್ಲದೆ ಪೂರ್ಣನಾಗಿರುವವ.

**ನಿತ್ಯಂ–** ಎಂದೆಂದಿಗೂ ಇರುವವ. ಜಗತ್ತು ನಾಶವಾದರೂ ಅವನು ಇಲ್ಲವೆಂದಾಗುವುದಿಲ್ಲ.

**ಅಜಂ–** ಜೀವರಂತೆ ಹುಟ್ಟಿಲ್ಲದವ, ತಾನಾಗಿಯೇ ಅವತರಿಸಿ ಬರುವವ.

**ಅಪಕ್ಷಯಾದ್ಯೈಃ ಅಖಿಲೈಃ ಅಸಂಗೀ–** ಒಂದೇ ದೇಹದಲ್ಲಿ ಜೀವನೊಡನೆ ನೆಲೆಸಿದ್ದರೂ ಕಷ್ಟ, ದುಃಖ, ಪಾಪ, ನಾಶ ಮುಂತಾದ ಯಾವ ದೋಷಕ್ಕೂ ಅಂಟಿಕೊಳ್ಳದೆ ಎಲ್ಲೆಡೆಯೂ ಶುಭರಸವನ್ನೇ ಉಣ್ಣುತ್ತ ಆನಂದದಿಂದಿರುವವ.

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.**

**ಬ್ರಹ್ಮಾಕ್ಷರಮಜಂ ನಿತ್ಯಂ ಯಥಾಸೌ ಪುರುಷೋತ್ತಮಃ ।**
**ತಥಾ ರಾಗಾದಯೋ ದೋಷಾಃ ಪ್ರಯಾಂತು ಪ್ರಶಮಂ ಮಮ ॥**

ಹೇಗೆ ನಾಶವಿರುವ ಬ್ರಹ್ಮಾದಿ ಕ್ಷರಪುರುಷ, ನಾಶವಿಲ್ಲದ ಲಕ್ಷ್ಮ್ಯಾದಿ ಅಕ್ಷರ ಪುರುಷರಿಗಿಂತ ಉತ್ತಮನಾದ ಹರಿಯು ಪರಿಪೂರ್ಣನಾಗಿ, ನಾಶರಹಿತನಾಗಿ, ಹುಟ್ಟಿಲ್ಲದವನಾಗಿ ನಿತ್ಯವಾಗಿರುವುದು ಸತ್ಯವೋ ಅಷ್ಟೇ ಸತ್ಯವಾಗಿ ನನ್ನೊಳಗೆ ಉಂಟಾದ ಕಾಮ-ಕ್ರೋಧಾದಿ ದೋಷಗಳು ಸಂಪೂರ್ಣವಾಗಿ ಉಪಶಮನಗೊಳ್ಳಲಿ.

**ಯ ಏತದ್ಬ್ರಹ್ಮಪಾರಾಖ್ಯಂ ಸಂಸ್ತವಂ ಪರಮಂ ಜಪನ್ ।**
**ಅವಾಪ ಪರಮಾಂ ಸಿದ್ಧಿಂ ಸ ಸಮಾರಾಧ್ಯ ಕೇಶವಮ್ ॥**

ವೇದಗಳ ಸ್ತುತಿಗಳಿಗೆ ಅಂತಿಮ ಗುರಿಯೇ ಶ್ರೀಹರಿ. ಆದ್ದರಿಂದ ಅವನೇ ಬ್ರಹ್ಮಪಾರ. ಅವನ ಸ್ತೋತ್ರವೇ ಬ್ರಹ್ಮಪಾರಸ್ತೋತ್ರ. ಇಂತಹ ಶ್ರೇಷ್ಠವಾದ ಸ್ತೋತ್ರವನ್ನು ಜಪಿಸುತ್ತಾ, ಬ್ರಹ್ಮ-ರುದ್ರಾದಿಗಳ ಒಡೆಯನಾದ ಶ್ರೀಹರಿಯನ್ನು ಆರಾಧಿಸುತ್ತ ಕಂಡುಮುನಿಗಳು ಪರಮಸಿದ್ಧಿಯನ್ನು (ಮೋಕ್ಷವನ್ನು) ಪಡೆದರು.

**ಇಮಂ ಸ್ತವಂ ಯಃ ಪಠತಿ ಶೃಣುಯಾದ್ವಾಪಿ ನಿತ್ಯಶಃ ।**
**ಸ ಕಾಮದೋಷೈರಖಿಲೈರ್ಮುಕ್ತೋ ಪ್ರಾಪ್ನೋತಿ ವಾಂಛಿತಮ್ ॥**

ಯಾವನು ಈ ಸ್ತೋತ್ರವನ್ನು ನಿತ್ಯವೂ ಪಠಿಸುತ್ತಾನೋ ಅಥವಾ ಕೇಳುತ್ತಾನೋ ಅಂಥವನು ಕಾಮ-ಕ್ರೋಧಾದಿ ದೋಷಗಳಿಂದ ಮುಕ್ತನಾಗಿ ಇಷ್ಟಾರ್ಥವನ್ನು ಪಡೆಯುವವನಾಗುತ್ತಾನೆ. **(ಸಶೇಷ)**

(18ನೇ ಪುಟದಿಂದ)

ಈ ಪರ್ವಕಾಲದಲ್ಲಿ ಮಂಗಳೂರಿನ ಕೆ.ಸಿ.ಆಳ್ವ ಬಂಧುಗಳಿಂದ ಶ್ರೀವಿಷ್ಣುಮೂರ್ತಿದೇವರಿಗೆ ರಜತಕವಚ ಮತ್ತು ತತ್ಸಂಯುಕ್ತ ವಿಶೇಷ ಅನ್ನದಾನಸೇವೆ ನಡೆಯಿತು. ಪ್ರತಿಯೊಂದು ಕಾರ್ಯಕ್ರಮವನ್ನೂ ಆದಷ್ಟು ವ್ಯವಸ್ಥಿತವಾಗಿ ಶಿಸ್ತುಬದ್ಧವಾಗಿ ನಡೆಸುವುದರಲ್ಲಿ ಶ್ರೀ ಎಂ.ಬಿ. ಪುರಾಣಿಕರ ಕರ್ತೃತ್ವಶಕ್ತಿ, ಶ್ರೀಕೆ.ಸಿ ಆಳ್ವರಂತಹ ದಾನಿಗಳ ನಿರ್ವ್ಯಾಜ್ಯದಾನ, ಶ್ರೀ ಸೀತಾರಾಮ ಶೆಟ್ಟಿ, ಪ್ರಭಾಕರ ರೈ, ಐತಪ್ಪ ಇವರ ಸಂಘಟನಾ ಚಾತುರ್ಯ ಹಾಗೂ ಮಾತೃಮಂಡಳಿ ಮತ್ತು ಯುವಕ ವೃಂದದವರ ಭಕ್ತಿಪೂರ್ವಕ ಕರಸೇವೆ ಮುಂತಾದುವು ಈ ಕಾರ್ಯಕ್ರಮಗಳ ಯಶಸ್ಸಿಗೆ ಮುಖ್ಯ ಕಾರಣ.

**ಭಾರತೀಯ ಸಂಸ್ಕೃತಿ-ವಿದ್ಯೆಗಳನ್ನು ಕಲಿಯಲು ತೊಡಗಿರಿ.**



*

(ಗೀತಾಜಯಂತೀ ಪ್ರಯುಕ್ತ ವಿಶೇಷ ಲೇಖನ)

# ಗೀತೆಯ ಸುತ್ತ

–ಕಾವೇಶನಾಭ

ಗೀತೆ ಎಂದರೆ ಅದು 'ಭಗವದ್ಗೀತೆ' ಎಂದೇ ಅರ್ಥ. 'ಭಗ' ಇಲ್ಲದವನು ಹೇಗೆ ತಾನೇ ಇದನ್ನು ಉಲಿದಾನು. ಅರ್ಥಾತ್ ಭಗ ಎಂದರೆ ಷಡ್ಗುಣೈಶ್ವರ್ಯಗಳು. ಅಂತಹ ಯೋಗ್ಯತೆ ಕೃಷ್ಣನಿಗಷ್ಟೇ ಇರಲು ಸಾಧ್ಯ. ಪರಾಧೀನತೆಯ ಪರಾಕಾಷ್ಠೆಯಲ್ಲಿರುವ ಈ ಮನುಷ್ಯಜೀವನ ಎಂದೆಂದಿಗೂ ಸ್ವತಂತ್ರ ಎನಿಸಲಾರದು. ಒಂದು ದೇಶದವರ ಕೈಯಿಂದ, ಮತ್ತೊಂದು ದೇಶ ಬಿಡಲ್ಪಟ್ಟಿತು ಎಂದಾಕ್ಷಣ 'ಸ್ವತಂತ್ರ' ದೇಶ ಎನ್ನುವುದಕ್ಕಿಂತಲೂ ಪರದೇಶದ ಸಂಸ್ಕೃತಿಯನ್ನು ಮೂಲೋತ್ಪಾಟನೆ ಮಾಡಿದಾಗ ಮಾತ್ರ 'ಸ್ವತಂತ್ರದೇಶ' ಎನ್ನುವುದು ಹೆಚ್ಚು ಸೂಕ್ತ. ಸಾಮಂತ ರಾಜನೊಬ್ಬನು ಪ್ರಧಾನರಾಜನ ಅಧಿಕಾರದಿಂದ ಪ್ರತ್ಯೇಕನಾದರೂ,ತನ್ನದೇ ಅಭಿಪ್ರಾಯದಿಂದ ಆಡಳಿತ ನಡೆಸಿದಾಗ ಮಾತ್ರ ಅವನ ಆ ಸ್ವತಂತ್ರತೆಗೆ ಹೆಚ್ಚು ಬೆಲೆ. ಇಂತಹ ಸ್ವತಂತ್ರಧರ್ಮ ನಮ್ಮಲ್ಲೆಲ್ಲಿದೆ? ನಾವೆಣಿಸಿದ ಕೆಲಸಗಳನ್ನು ನಮ್ಮ ಕೈಗಳು ಮಾಡುತ್ತಿಲ್ಲ. ನಮ್ಮ ಕಣ್ಣುಗಳು ನೋಡುತ್ತಿಲ್ಲ ಎಂಬುದಾಗಿ ನಮ್ಮ ಇಂದ್ರಿಯಗಳನ್ನೇ ಹತೋಟಿಯಲ್ಲಿಟ್ಟುಕೊಳ್ಳದ ನಾವು, 'ಹೃಷೀಕೇಶ' ರಾಗಲು ಸಾಧ್ಯವೆ? ಖಂಡಿತ ಇಲ್ಲ. ಅದು ಸಾಧ್ಯವಿಲ್ಲ. ನಾವು ಲೌಕಿಕವಾಗಿಯೂ, ಅಧ್ಯಾತ್ಮಿಕವಾಗಿಯೂ ಪರಾಧೀನರೇ, ಸರಿ. ದೇವರನ್ನು ಮುಂದಿಟ್ಟುಕೊಂಡು ನಾವು ಕೆಲಸ ಆರಂಭಿಸಿದರೆ , ನಮ್ಮ ಕೆಲಸವೂ ಧನ್ಯ, ನಾವೂ ಧನ್ಯರು. ಇದರ ಸೂಚನಾದಾಯಿಕೆಯೇ ಭಗವದ್ಗೀತೆ. ಭಗವಂತನೇ ಭಕ್ತನಿಗೆ ಒಲಿದು, ಉಲಿದ ಗೀತೆ.

**ಜೀವನದಲಿ ಬೇಕು ಜ್ಞಾನದ ಬೆಳಕು**
**ಬೆಳಕು ಇಲ್ಲದಿರೆ, ತೊಲಗದು ಕತ್ತಲೆ,**
**ಕತ್ತಲೆಯು ಅಜ್ಞಾನ, ಬೆಳಕದು ವಿಜ್ಞಾನ**
**ಅಜ್ಞಾನವ ತೊಲಗಿಸಿ, ಜ್ಞಾನದೀಪವ ಬೆಳೆಸಿ**
**ಕತ್ತಲೆಯಲಿರುವುದು ಕಲೆ–ಬೆಳಕಲಿರುವುದು ಬೇಕು,**
**ಬೇಕು ಬೇಕೇ ಬೆಳಕು–ತಮದ ಸಂಬಂಧವು ಸಾಕು**
**ದೀಪವನು ನೋಡಲು–ಬೇರೆ ದೀಪ ಬೇಕಿಲ್ಲ**
**ದೀಪವನು ಬೆಳಗಲು–ಬೇಕು ಇನ್ನೊಂದು ದೀಪ**

ಹಸಿದವರಿಗೆ ಅನ್ನವನ್ನು ನೀಡಿ.

## ವಿಷ್ಣುಸಹಸ್ರನಾಮದ ಪ್ರಕಟಣ–ಸೇವೆಗೊಂದು ಸರಳ, ಸುಲಭ ಅವಕಾಶ

ಪ್ರಾತಃಸ್ಮರಣೀಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರಿಂದ ತಮ್ಮ ಎರಡನೇ ಪರ್ಯಾಯಾವಧಿಯಲ್ಲಿ ನಾಲ್ಕು ಸಂಪುಟಗಳಲ್ಲಿ ೨೦೦೦ಕ್ಕಿಂತಲೂ ಅಧಿಕಪುಟಗಳಲ್ಲಿ ವಿಸ್ತೃತ ಕನ್ನಡವ್ಯಾಖ್ಯಾನದೊಂದಿಗೆ ಪ್ರಕಟಿಸಲ್ಪಟ್ಟು ಶ್ರೀಕೃಷ್ಣಮುಖ್ಯಪ್ರಾಣರಿಗೆ ಜ್ಞಾನಪುಷ್ಪವಾಗಿ ಸಮರ್ಪಿಸಲ್ಪಟ್ಟಿರುವ ವಿಷ್ಣುಸಹಸ್ರನಾಮಕೃತಿ ಜಿಜ್ಞಾಸುಗಳ ಬೇಡಿಕೆಗೆ ಅನುಗುಣವಾಗಿ ಮತ್ತೆ ಪ್ರಕಟಣೆಯ ಬೆಳಕನ್ನು ಕಾಣಲಿದೆ.

ಶ್ರೀ ಶ್ರೀ ವಿದ್ಯಾಧೀಶತೀರ್ಥರು ಪ್ರತಿಯೊಂದು ನಾಮಕ್ಕೆ ಸಂಬಂಧಿಸುವ ಬೃಹತೀಸಹಸ್ರದ ಋಙ್ಮಂತ್ರವನ್ನು ಆಯಾ ನಾಮಾರ್ಥದ ಅನುಸಂಧಾನಕ್ಕೆ ಪುಷ್ಟಿ ದೊರಕುವಂತೆ ನಡೆಸಿರುವ ಸರಳಾನುವಾದದಿಂದ ಈ ಕೃತಿ ವಿಶೇಷವಾಗಿ ಉಪಯುಕ್ತವೆನಿಸಲಿದೆ.

ಇದನ್ನು ಪ್ರಕಟಿಸಿ ಜಿಜ್ಞಾಸುಗಳಿಗೆಲ್ಲ ತಲುಪುವಂತೆ ಮಾಡುವ ಪುಣ್ಯ ಸಾಮಾನ್ಯ ಸಾಧಕನಿಗೂ ದೊರಕುವಂತಾಗಬೇಕೆಂದು ಸರಳವಾದ ಯೋಜನೆಯೊಂದನ್ನು ಹಮ್ಮಿಕೊಳ್ಳಲಾಗಿದೆ.

ಒಬ್ಬೊಬ್ಬ ಸಾಧಕ ಸಹಸ್ರನಾಮದ ಒಂದೊಂದು ನಾಮದ ಪ್ರಕಟಣೆಯ ಪ್ರಾಯೋಜಕತ್ವವನ್ನು ವಹಿಸಿಕೊಳ್ಳುವ ಮೂಲಕ ವಿಷ್ಣುಸಹಸ್ರನಾಮದ ಒಂದು ನಾಮದ ಪ್ರಕಟಣೆಯ ವೆಚ್ಚವಾಗಿ ಒಂದು ಸಾವಿರದ ಎಂಟು ರೂ. ನೀಡಬೇಕು. ಇದರಿಂದಾಗಿ ಅವರ ಹೆಸರಿನಲ್ಲಿ ಒಂದು ನಾಮದ ಪ್ರಕಟಣೆ ನಡೆಯುವಂತಾಗುವುದಲ್ಲದೆ, ಅವರ ಸೇವೆಯ ನೆನಪಿಗಾಗಿ ಪ್ರಕಟವಾದ ಕೃತಿಯ ಒಂದು ಪ್ರತಿಯನ್ನು ಉಚಿತವಾಗಿ ನೀಡಲಾಗುವುದು. ಹೀಗೆ ಒಬ್ಬ ಸಾಧಕ ತನ್ನ ಹೆಸರಿನಲ್ಲಿ ಎಷ್ಟು ನಾಮಗಳ ಪ್ರಕಟಣೆಯ ಪ್ರಾಯೋಜಕತ್ವವನ್ನೂ ವಹಿಸಿಕೊಳ್ಳಬಹುದಾಗಿದೆ. ಪ್ರಾಯೋಜಕರ ಹೆಸರುಗಳನ್ನು ಕೊನೆಯಲ್ಲಿ ಪ್ರಕಟಿಸಲಾಗುವುದು.

ವಿಷ್ಣುಸಹಸ್ರನಾಮ ವಾಙ್ಮಯದ ಈ ಬಗೆಯ ಪ್ರಕಟಣಾ ಸೇವೆಯಲ್ಲಿ ಪಾಲ್ಗೊಂಡು ಹರಿಗುರುಗಳ ಪರಮಾನುಗ್ರಹಕ್ಕೆ ಹಾಗೂ ಶ್ರೀವಿದ್ಯಾಮಾನ್ಯತೀರ್ಥರ ಪರಮಾನುಗ್ರಹಕ್ಕೆ ಪಾತ್ರರಾಗಬೇಕೆಂದು ಬಯಸುವ ಸಾಧಕರು ಈ ವಿಳಾಸದೊಂದಿಗೆ ಸಂಪರ್ಕಿಸಿ.

**ಮೆನೇಜರ್, ಶ್ರೀಪಲಿಮಾರು ಮಠ, ರಥಬೀದಿ, ಉಡುಪಿ. ದೂರವಾಣಿ ಸಂಖ್ಯೆ: (0820) 2523402, ಶ್ರೀವಿಷ್ಣುಸಹಸ್ರನಾಮ ಪ್ರಕಾಶನ ವಿಭಾಗ ಹೆಸರಿನಲ್ಲಿ ಚೆಕ್ಕು ಅಥವಾ ಡಿ.ಡಿ ಮೂಲಕವಾಗಲಿ ಪೂರ್ಣವಿಳಾಸದೊಂದಿಗೆ ಕಳುಹಿಸಬಹುದು.**

**ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ.**

# ಅನುಸಂಧಾನದಲ್ಲಿ –ಅಂತರ್ಯಾಮಿತ್ವ

**–ಡಿ. ಗುರುಪ್ರಸಾದ್ ಭಟ್**

**'ಉತ್ಪತ್ತಿಸ್ಥಿತಿ ಸಂಹಾರಾಃ ನಿಯತಿರ್ಜ್ಞಾನಮಾವೃತಿಃ ।**
**ಬಂಧಮೋಕ್ಷೌ ಚ ಪುರುಷಾದ್ ಯಸ್ಮಾತ್ ಸ ಹರಿರೇಕರಾಟ್'** (ಭಾಗವತ)

ಎಂಬಂತೆ ವೇದವ್ಯಾಸರ **'ಜನ್ಮಾದ್ಯಸ್ಯ ಯತಃ'** ಎಂಬ ಎರಡನೇ ಬ್ರಹ್ಮಸೂತ್ರದಲ್ಲಿ ಪ್ರತಿಪಾದಿಸಲ್ಪಟ್ಟ ಭಗವಂತನ ಸೃಷ್ಟ್ಯಾದಿ ಅಷ್ಟಕಗಳಲ್ಲಿ ನಾಲ್ಕನೆಯದ್ದು ನಿಯಮನ ತಾನೇ? ಈ ನಿಯಮನದ ವಿಷಯದಲ್ಲಿ ಜೀವರಿಗೆ ಪೂರ್ಣ ಅಸ್ವಾತಂತ್ರ್ಯವನ್ನು ಪ್ರತಿಪಾದಿಸಿ ಜೀವರ ಸ್ವಭಾವ ಕರ್ಮಗಳಿಗೆ ಅನುಸಾರವಾಗಿ ಒಳಗೆ ಇದ್ದುಕೊಂಡು ಕರ್ಮಗಳನ್ನು ಮಾಡಿಸುವ ಅಧಿಕಾರ ಭಗವಂತನಿಗೇ ಸೇರಿದ್ದು ಎಂಬುದನ್ನು ಸ್ಪಷ್ಟವಾಗಿ ಪ್ರತಿಪಾದಿಸಿದವರು ಆಚಾರ್ಯಮಧ್ವರು. ಇದನ್ನೇ ಮಧ್ವರ ಸಿದ್ಧಾಂತದಲ್ಲಿ **'ಅಂತಃನಿಯಮಯತಿ ಇತಿ ಅಂತರ್ಯಾಮೀ'** ಎಂಬುದಾಗಿ ಅನುಸಂಧಾನಕ್ಕೂ ಬಳಸಿಕೊಳ್ಳುವುದು ಬಹಳ ಔಚಿತ್ಯಪೂರ್ಣವಾಗಿದೆ.

ತನ್ನ ತಂತ್ರಸಾರ ಸಂಗ್ರಹ ಗ್ರಂಥದಲ್ಲೂ ಮಧ್ವರು 4ನೇ ಅಧ್ಯಾಯದಲ್ಲಿ ಅನ್ಯದೇವತಾ ಉಪಾಸನಾಕ್ರಮವನ್ನು ತಿಳಿಸುವಾಗ **'ಅಂತರ್ಯಾಮಿತಯಾಧ್ಯೇಯಃ'** ಅಂದಿದ್ದಾರೆ. ಈ ಅಂತರ್ಯಾಮಿತ್ವ ರೂಪ ಅನುಸಂಧಾನ ಆಚಾರ್ಯರ ಕಲ್ಪನೆಯೇ? ಎಂಬ ಪ್ರಶ್ನೆ ಬಂದಾಗ, ಮಧ್ವರು ಯಾವುದನ್ನು ಕೂಡ ಪ್ರಮಾಣವಿಲ್ಲದೇ ತನ್ನ ಅಭಿಪ್ರಾಯವನ್ನು ಯಾವ ಗ್ರಂಥದಲ್ಲೂ ತಿಳಿಸಲಿಲ್ಲ ತಾನೆ? ವ್ಯಾಸರ ಬ್ರಹ್ಮಸೂತ್ರ ಮತ್ತು ಭಾಗವತಾದಿ ಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟ 'ನಿಯಮನ'ವನ್ನು ಅಂತರ್ಯಾಮಿತ್ವ ರೂಪ ಅನುಸಂಧಾನವಾಗಿ ಎಲ್ಲಾ ಕಡೆ ಬಳಸಿಕೊಳ್ಳಿ ಎಂಬ ಎಚ್ಚರ ನೀಡಿದ್ದಾರೆ ಅಷ್ಟೇ. ಯಾಕೆಂದರೆ ನಾವು ಕರ್ಮಗಳನ್ನು ಮಾಡುವಾಗ ಭಗವದರ್ಪಣ ಬುದ್ಧಿಯಿಂದ, ವಿನಯಪೂರ್ವಕವಾಗಿ, ಭಕ್ತಿ ಪೂರ್ವಕವಾಗಿ ಮಾಡಬೇಕು. ಕಿಂಚಿತ್ತೂ 'ನಾನು ಮಾಡಿದೆ' ಎಂಬ ಅಹಂಕಾರದ ಲೇಶ ಇರಬಾರದು. **'ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ'** ಎಂಬುದನ್ನು ಕೃಷ್ಣನೂ ಗೀತೆಯಲ್ಲಿ ತಿಳಿಸಿದ್ದಾನೆ. ಲೌಕಿಕ ವ್ಯವಹಾರದಲ್ಲೂ ಕೂಡ ನಮಗೆ ವಿಶೇಷವಾಗಿ ಸರ್ಕಾರಿ ಕಛೇರಿಗಳಲ್ಲಿ

**ಭಗವದ್ಗೀತೆ–ವಿಷ್ಣುಸಹಸ್ರನಾಮ–ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ**

ಸ್ಥಾನ-ಮಾನದಿಂದ ಉನ್ನತಮಟ್ಟದಲ್ಲಿರುವ ಅಧಿಕಾರಿಗಳನ್ನು ಗೌರವಿಸುವ ಸಂದರ್ಭದಲ್ಲಿ ಈ ಅಂತರ್ಯಾಮಿತ್ವದ ಅನುಸಂಧಾನದೊಂದಿಗೆ ಅವರನ್ನು ಗೌರವಿಸುವುದು ಸಮಾಧಾನಕಾರಿಯಾಗುತ್ತದೆ ಅಲ್ಲವೆ? ಅನ್ಯದೇವತಾ ಪ್ರತಿಮೆಗಳನ್ನು ಪೂಜಿಸುವ ಸಂದರ್ಭದಲ್ಲೂ, ಅದರಲ್ಲೂ ವಿಶೇಷವಾಗಿ ನಮ್ಮ ಪರಶುರಾಮ ಸೃಷ್ಟಿಯಲ್ಲಿ ನಾಗ, ದೈವ ಶಿಲಾಪ್ರತಿಮೆಗಳನ್ನು ಪೂಜಿಸುವ ಸಂದರ್ಭದಲ್ಲಿ ಈ ಅಂತರ್ಯಾಮಿತ್ವದ ಚಿಂತನೆ ಸಮಾಧಾನಕಾರಿಯಾಗಬಲ್ಲದು. ಜೀವರ ಯೋಗ್ಯತೆಗೆ ಅನುಗುಣವಾಗಿ, ಫಲಾಪೇಕ್ಷೆಯನ್ನು ನಿರೀಕ್ಷಿಸಿ ಮಾಡತಕ್ಕ ನೈಮಿತ್ತಿಕ ಕರ್ಮಗಳಲ್ಲಿ ಅನ್ಯದೇವತಾ ಉಪಾಸನೆ ಅನಿವಾರ್ಯವಾಗಿದ್ದರೂ ಅಂತರ್ಯಾಮಿತ್ವದ ಅನುಸಂಧಾನ ಇರಲೇಬೇಕಾಗುತ್ತದೆ. ಇಲ್ಲದಿದ್ದಲ್ಲಿ ನಾವು ಮಾಡಿದ ಕರ್ಮ ಶಾಸ್ತ್ರೀಯ ಆಗಲಾರದು. ನಿಜವಾದ ಫಲವನ್ನೂ ತಂದುಕೊಡಲಾರದು. ಯಾಕೆಂದರೆ ಕರ್ಮದ ಜತೆ ಭಾವಶುದ್ಧಿ ಇರುವುದಿಲ್ಲ ತಾನೆ? ಅಹಂಕಾರ, ಪ್ರತಿಷ್ಠೆಗಾಗಿ ಮಾಡಿದ ಕರ್ಮ ಬಂಧಕವೇ ಆಗುತ್ತದೆ. ಆದ್ದರಿಂದ ಈ ಅಂತರ್ಯಾಮಿತ್ವದ ಅನುಸಂಧಾನ ಬಹಳ ಮುಖ್ಯ.

ಕೃಷ್ಣನು ಗೀತೆಯಲ್ಲೂ ಕೂಡ ಅರ್ಜುನನಿಗೆ ಉಪದೇಶಿಸುವ ಸಂದರ್ಭದಲ್ಲಿ **'ಈಶ್ವರಃ ಸರ್ವಭೂತಾನಾಂ ಹೃದ್ದೇಶೇ ಅರ್ಜುನತಿಷ್ಠತಿ'** ಅಂದಿದ್ದಾನೆ. ಅಂದರೆ ಪರೋಪಕಾರ ಮಾಡುವಾಗಲೂ, ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವಾಗಲೂ ಕೇವಲ ವ್ಯಕ್ತಿಯ ಜಾತಿ, ಧರ್ಮವನ್ನು ಲೆಕ್ಕಿಸದೇ, ಮಾನವೀಯತೆಯ ದೃಷ್ಟಿಯಿಂದ ಎಲ್ಲ ಜೀವರ ಒಳಗೆ 'ಈಶ್ವರ'ನಿದ್ದಾನೆ ಎಂಬ ಅಂತರ್ಯಾಮಿತ್ವದ ಅನುಸಂಧಾನದೊಂದಿಗೆ ಸಹಾಯ ಮಾಡಿದರೆ ಅನುಸಂಧಾನವು ನಮ್ಮನ್ನು ಸಮಾಧಾನಕಾರಿಯಾಗಿ ಧನ್ಯತಾ ಭಾವನೆಗೆ ಕೊಂಡೊಯ್ಯಲು, ಕೃತಕೃತ್ಯತೆಯನ್ನುಂಟುಮಾಡಲು ಸಹಕಾರಿಯಾಗುತ್ತದೆ. ಆದ್ದರಿಂದ ಮಧ್ವರ ಸಿದ್ಧಾಂತಕ್ಕೆ ಅನುಗುಣವಾಗಿ ಅಂತರ್ಯಾಮಿತ್ವದ ಅನುಸಂಧಾನ, ಎಲ್ಲ ಸಂಶಯಗಳಿಗೂ ಉತ್ತರರೂಪವಾಗಿ, ಸಮಾಧಾನಕಾರಿಯಾದ, ನಿಶ್ಚಯಾತ್ಮಕವಾದ ಯಥಾರ್ಥಜ್ಞಾನಕ್ಕೆ ಕಾರಣವಾಗಿದೆಯಲ್ಲವೆ? ಆದ್ದರಿಂದ ಈ ವಿಷಯದಲ್ಲಿ ನಾವು ನಮ್ಮ ಆದಿಗುರುಗಳಾದ ಮಧ್ವರಿಗೆ ಚಿರಋಣಿಗಳು.

**'ನಮಃ ಶ್ರೀಮನ್ ಮಧ್ವ ಪ್ರದಿಶಸುದೃಶಂ ನೋ ಜಯ ಜಯ'**

---

**ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ**

ಮುಖಪುಟಲೇಖನ

# ಕೇಶವ

–ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

ಭಗವಂತನ ಚತುರ್ವಿಂಶತಿ ಮೂರ್ತಿಗಳಲ್ಲಿ ಮೊದಲನೆಯದು ಕೇಶವ ರೂಪ. ಕೇಶವಾದಿ ದಾಮೋದರ ಪರ್ಯಂತ ಭಗವಂತನ ಹನ್ನೆರಡುರೂಪಗಳು ಮಾರ್ಗಶೀರ್ಷ ಕಾರ್ತಿಕ ಮಾಸದವರೆಗಿನ ಹನ್ನೆರಡುಮಾಸಗಳಿಗೆ ನಿಯಾಮಕರೂಪಗಳು. ಆದ್ದರಿಂದ ಕೇಶವ ರೂಪವು ಮಾರ್ಗಶೀರ್ಷಮಾಸಕ್ಕೆ ನಿಯಾಮಕ. ಕೇಶವಾದಿ ಇಪ್ಪತ್ನಾಲ್ಕು ರೂಪಗಳು ಗಾಯತ್ರಿಯ ಇಪ್ಪತ್ನಾಲ್ಕು ವರ್ಣಗಳಿಂದ ಪ್ರತಿಪಾದ್ಯವಾದ ರೂಪಗಳು. ಅದರಂತೆ ಗಾಯತ್ರಿಯ ಮೊದಲನೆಯ ವರ್ಣವಾದ "ತ" ಕಾರದಿಂದ ಭಗವಂತನ ಕೇಶವರೂಪವು ಪ್ರತಿಪಾದ್ಯವಾಗಿದೆ.

ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ಭಗವಂತನ ಈ ಇಪ್ಪತ್ನಾಲ್ಕು ರೂಪಗಳ ಚಿಂತನೆಯ ಕ್ರಮವನ್ನು ತಿಳಿಸಿದ್ದಾರೆ. ನಾಲ್ಕು ಕೈಗಳುಳ್ಳ ಕೇಶವ ರೂಪಿ ಪರಮಾತ್ಮನನ್ನು ಮೇಲಿನ ಬಲಗೈಯಲ್ಲಿ ಶಂಖವನ್ನು ಮೇಲಿನ ಎಡಗೈಯಲ್ಲಿ ಚಕ್ರವನ್ನು ಕೆಳಗಿನ ಎಡಗೈಯಲ್ಲಿ ಗದೆಯನ್ನು ಕೆಳಗಿನ ಬಲಗೈಯಲ್ಲಿ ಪದ್ಮವನ್ನು ಧರಿಸಿದವನನ್ನಾಗಿ ಧ್ಯಾನಿಸಬೇಕೆಂದು ತಿಳಿಸಿದ್ದಾರೆ. ಭಗವಂತನ ಎಲ್ಲ ರೂಪಗಳು ಸಚ್ಚಿದಾನಂದಮಯವೆಂದು ಮೊದಲೇ ತಿಳಿಸಿದರಿಂದ ಕೇಶವಾದಿರೂಪಗಳೂ ಕೂಡ ಸಚ್ಚಿದಾನಂದಮಯವೆಂದೇ ತಿಳಿದುಕೊಳ್ಳಬೇಕು.

ಕೇಶವ ಎಂಬ ಭಗವಂತನ ಹೆಸರಿಗೆ ಅನೇಕ ಅರ್ಥಗಳಿವೆ. ಕಶ್ಚ+ಈಶಶ್ಚ=ಕೇಶೌ, ಕೇಶೌ ವಹತೀತಿ ಕೇಶವಃ. ಕ=ಬ್ರಹ್ಮ, ಈಶ=ರುದ್ರ, ಅವರಿಬ್ಬರನ್ನು ವ=ನಿಯಮನೆ ಮಾಡುವವ ಎಂದು ಅರ್ಥ. ಕಂ=ನೀರು, ಕಸ್ಯ+ಈಶಃ=ಕೇಶಃ(ವರುಣ), ನೀರಿನ ಅಧಿಪತಿ ವರುಣ. ವರುಣನಿಗೆ ವ ಅಂದರೆ ನಿಯಾಮಕ ಎಂದು ಅರ್ಥ. ಇದೇ ರೀತಿ ಅನೇಕ ಅರ್ಥಗಳಿವೆ. ಈ ಕೇಶವ ರೂಪವನ್ನು ಶ್ರೀಮಧ್ವಾಚಾರ್ಯರು ದ್ವಾದಶ ಸ್ತೋತ್ರದಲ್ಲಿ–

**ಕೇಶವ ಕೇಶವ ಶಾಸಕ ವಂದೇ ಪಾಶಧರಾರ್ಚಿತ ಶೂರವರೇಶ** ಎಂದು ಸ್ತುತಿಸಿದ್ದಾರೆ. ಸರ್ವ ನಿಯಾಮಕನಾದ ವರುಣನಿಂದ ಪೂಜಿಸಲ್ಪಟ್ಟ ಶೂರನಾದ ಸರ್ವಶ್ರೇಷ್ಠನಾದ ಸಮರ್ಥನಾದ ಲಕ್ಷ್ಮೀಶನಾದ ಕೇಶವನಿಗೆ ನಮಸ್ಕಾರ ಎಂದು ಶ್ರೀಆಚಾರ್ಯರು ವರ್ಣಿಸಿದ್ದಾರೆ.

**ಅರ್ಚಿತಃ ಸಂಸ್ಮೃತಃ ಧ್ಯಾತಃ ಕೀರ್ತಿತಃ ಕಥಿತಃ ಶ್ರುತಃ।**
**ಯೋದದಾತ್ಯಮೃತತ್ವಂ ಹಿ ಸಮಾಂ ರಕ್ಷತು ಕೇಶವಃ॥**

ಶ್ರೀಮಾಧ್ವಗ್ರಂಥಗಳ ಅಧ್ಯಯನ ನಿಮ್ಮ ಯೋಗ್ಯತೆಗೆ ಸರಿಯಾಗಿ ಮಾಡಿರಿ

ಈ ಕೇಶವನನ್ನು ಪೂಜಿಸಿದರೆ ಸ್ಮರಿಸಿದರೆ ಧ್ಯಾನಿಸಿದರೆ ಕೀರ್ತನೆ ಮಾಡಿದರೆ ಅವನ ಗುಣಗಾನವನ್ನು ಮಾಡಿದರೆ ಅಥವ ಕೇಳಿದರೆ ನಮಗೆ ಅಮೃತತ್ವರೂಪವಾದ ಮೋಕ್ಷವನ್ನು ಕೊಡುತ್ತಾನೆ ಎಂದು ಮಧ್ವಾಚಾರ್ಯರು ತಮ್ಮ ಕೃಷ್ಣಾಮೃತಮಹಾರ್ಣವ ಗ್ರಂಥದ ಮಂಗಳಾಚರಣೆಯಲ್ಲಿ ತಿಳಿಸಿದ್ದಾರೆ. ಇದನ್ನೇ ಹರಿದಾಸವರೇಣ್ಯರಾದ ಆದಿಕೇಶವ ಎಂಬ ನಾಮಾಂಕಿತದಲ್ಲಿ ತಮ್ಮ ಕೃತಿಗಳನ್ನು ರಚಿಸಿರುವ ಕೇಶವನ ಆರಾಧಕರಾದ ಕನಕದಾಸರು ತಮ್ಮ ಚತುರ್ವಿಂಶತಿ ಮೂರ್ತಿಗಳ ಸ್ತೋತ್ರಮಾಡುವ ಕೃತಿಯಲ್ಲಿ ತಿಳಿಸಿದ್ದಾರೆ.

**ಈಶ ನಿನ್ನ ಚರಣಭಜನೆ ಆಸೆಯಿಂದ ಮಾಡುವೆನು।**
**ದೋಷರಾಶಿ ನಾಶಮಾಡೋ ಶ್ರೀಶ ಕೇಶವ॥**

ಸರ್ವಸಮರ್ಥನಾದ ಲಕ್ಷ್ಮೀಶನಾದ ಕೇಶವನೇ ನಿನ್ನ ಪದ ಕಮಲಗಳ ಸೇವೆಯನ್ನು ಭಕ್ತಿಯಿಂದ ಮಾಡುತ್ತೇನೆ, ನನ್ನ ದೋಷಗಳ ಸಮುದಾಯವನ್ನು ನಾಶಮಾಡು ಎಂದು ಪ್ರಾರ್ಥಿಸಿದ್ದಾರೆ. ದೋಷರಾಶಿಯನ್ನು ನಾಶಮಾಡುವುದು ಎಂದರೆ ಮೋಕ್ಷವನ್ನು ಕರುಣಿಸುವುದು ಎಂದೇ ಅರ್ಥ. ಶ್ರೀಮಧ್ವಾಚಾರ್ಯರ ಮಂಗಳಾಚರಣೆಯ ವಿಷಯವನ್ನೇ ಕನಕದಾಸರು ಪ್ರಾರ್ಥನಾ ರೂಪದಲ್ಲಿ ತಿಳಿಸಿಕೊಟ್ಟಿದ್ದಾರೆ. ಶ್ರೀನಾರಾಯಣವರ್ಮದಲ್ಲಿ ಯಾವ ಕಾಲದಲ್ಲಿ ಯಾವ ಭಗವದ್ರೂಪವನ್ನು ಚಿಂತಿಸಬೇಕು ಎಂದು ತಿಳಿಸುತ್ತಾ, **ಮಾಂ ಕೇಶವೋ ಗದಯಾ ಪ್ರಾತರವ್ಯಾತ್**। ಎಂದು ಕೇಶವರೂಪಿ ಭಗವಂತನು ಪ್ರಾತಃ ಕಾಲದಲ್ಲಿ ನಮ್ಮನ್ನು ರಕ್ಷಣೆಮಾಡುತ್ತಾನೆಂದು ತಿಳಿಸಿದ್ದಾರೆ. ಈ ರೀತಿಯಾಗಿ ಮಹಾತ್ಮರು ತಿಳಿಸಿದಂತೆ ಕೇಶವರೂಪಿ ಪರಮಾತ್ಮರನ್ನು ಧ್ಯಾನಿಸಿದರೆ ಕೇಶವನು ಮಹಾಫಲವಾದ ಮೋಕ್ಷವನ್ನೇ ನೀಡುತ್ತಾನೆ. ಇಂತಹ ಕೇಶವನನ್ನು ಪೂಜಿಸಿ ಕೃತಾರ್ಥರಾಗೋಣ.


**ಅಂತರ್ಜಾಲದಲ್ಲಿ ನಿರಂತರ ನೇರ ಪ್ರವಚನ**

ಮಹಾಭಾರತ, ರಾಮಾಯಣ, ಭಗವದ್ಗೀತೆ, ಹರಿಕಥಾಮೃತಸಾರ– ವಿಷಯಗಳ ಬಗ್ಗೆ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಪ್ರವಚನಗಳಿಗಾಗಿ ಶ್ರೀಮಠದ ಅಂತರ್ಜಾಲವನ್ನು ಸಂಪರ್ಕಿಸಿ.

**www.livepravachana.com**

(ವಿ.ಸೂ. ಈ ತಾಣದಲ್ಲಿ ಪ್ರವಚನ ನಿರ್ದಿಷ್ಟ ದಿನ ಹಾಗೂ ಸಮಯದಲ್ಲಿ ನೇರವಾಗಿ (**live**) ಕೇಳಬಹುದು).


**ಎಷ್ಟೋ ಜನುಮದ ಸುಕೃತದಿಂದ ಪ್ರಾಪ್ತವಾದ ಈ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಿ.**

ಪ್ರಶ್ನೋತ್ತರ–ಪದಬಂಧ

# ನೆನಪಿನ ಅಂಗಳ

–ವಿ॥ ಶಂಕರನಾರಾಯಣಾಚಾರ್ಯ

1) ಶ್ರುತಿತತಿಗಳಿಗೆ ಅಭಿಮಾನಿ ದೇವತೆ ಯಾರು?

2) ಭಗವಂತನ ದೇಹ ಯಾವ ರೀತಿಯದ್ದು?

3) ಆದಿ ಕಾವ್ಯ ಯಾವುದು?

4) ಆದಿ ಕವಿ ಯಾರು?

5) ರಾಮಾಯಣ ರಚಿತವಾದ ಯುಗ ಯಾವುದು?

6) ಕಟ್ಟಿಗೆಯನ್ನು ಕೊಡದಿರುವ ಗಿಡ ಯಾವುದು?

7) ಭಾರತದ ರಾಷ್ಟ್ರೀಯ ಪಶು ಯಾವುದು?

8) ಎಲ್ಲಿಯ ಜನರು ಮರಳಿನಲ್ಲಿ ಸ್ನಾನ ಮಾಡುತ್ತಾರೆ?

9) ಯಾವ ಪ್ರಾಣಿಯ ಕಣ್ಣಿನ ಮೇಲೆ ರೆಪ್ಪೆಗಳಿರುವುದಿಲ್ಲ?

10) ವಿಶ್ವದ ಅತ್ಯಂತ ಬಡದೇಶ ಯಾವುದು?

## ಕಳೆದ ಸಂಚಿಕೆಯ ಉತ್ತರ

1) ರುದ್ರ ದೇವರು 2) ಆಕಾಶದಲ್ಲಿ ಹರಿಯುವ ನದಿ 3) 7 4) 24,000
5) 500 6) ಹವಾಯಿ ದ್ವೀಪ 7) ನಾರ್ವೆ 8) ಮಲೇಶಿಯಾ
9) 22 ಡಿಸೆಂಬರ್ 10) ಗ್ರೀನ್‌ಲ್ಯಾಂಡ್

| | | | | |
|---|---|---|---|---|
| 1 ಹ | 2 ಯ | 3 ರ | 4 ದ | 5 ನ |
| 2 ನು | ತಿ | ವ | ರ | ದ |
| 3 ಮ | ದ | ದ | ವ | ರ |
| 4 ಗ | ಮ | ನ | ರ | ದ |
| 5 ದ | ನ | ವ | ದ | ನ |

ಪ್ರಾಣಿ ಹಿಂಸೆ ಮಾಡಬೇಡಿ

## ಎಡದಿಂದ ಬಲಕ್ಕೆ:

1) ಮೊಲದ ಚಿಹ್ನೆಯುಳ್ಳ ಚಂದ್ರ (2)

2) ಸಿಹಿಯಾದ ತಿಂಗಳು (4)

4) ನೀರಿನಲ್ಲಿ ಹುಟ್ಟಿದ್ದು (3)

5) ತವರಿನವರಿಗೆ ಸಂಬಂಧಿಸಿದ ನೆಂಟರು (3)

9) ಮಾನವನಿಂದ ಕೂಡಿದ ಮಂಗ (3)

10) ಹಸುವಿನೊಂದಿಗೆ ಮಾಡಿದ ಯುದ್ಧ (3)

12) ಜನಿಸಿದವನ ನಿಶ್ಚಿತ ಕ್ರಿಯೆ ತಿರುಗಿದೆ (3)

14) ಜನರನ್ನು ಹೊಂದಿದ ಸೇವಕ (3)

16) ತಾರ್ಕಿಕರ ಒಡೆಯ (3)

18) ಮೈಸೂರಿನ ಹಿಂದಿನ ರಾಜ, ಹೀಗೆ ಹೇಳೋಣ (9)




ಉತ್ತರ ಮುಂದಿನ ಸಂಚಿಕೆಯಲ್ಲಿ

## ಮೇಲಿನಿಂದ ಕೆಳಕ್ಕೆ:

1) ಸುಖಕ್ಕೆ ಒಯ್ಯುವ ದೇವರ ದಿನ (4)

3) ಸಂಗಿತ ಹಾಡಲು ಬೇಕಾದದ್ದು (2)

6) ಕೆಲಸ ಮಾಡಲು ಸಮರ್ಥ ಮುಂದಾಳು (3)

7) ಸದೃಶ ಚಿತ್ತ (4)

8) ರೋಗದೊಂದಿಗೆ ಇದನ್ನೂ ಸೇರಿಸಿ (3)

11) ದರದರನೆ ತಿಕ್ಕಿದ ಹಲ್ಲು (3)

13) ರಾಜರು ಸಂಚರಿಸುವ ಹಾದಿ (4)

15) ಹೊಸತಾದದ್ದು (3)

16) ನೀರನ್ನು ಕೊಡುವ ಮೇಘ (3)

17) ಹಗ್ಗದಿಂದ ಕೂಡಿದ ಸ್ವಾಮಿ (4)

**ನೀಚರನಾಶ್ರಯಿಸಿ ಕೆಡಬೇಡಿ.**